# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 265 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 27.04.2025 • ಭಾನುವಾರ • ಪುಟ:04 • ಬೆಲೆ:2
Volume:02 • Issue: 265 • PRGI No:KARKAN/2023/88055 • VIJAYANAGARA • 27.04.2025 • Sunday • Page:04 • Rs:2










## ರಾಜ್ಯಮಟ್ಟದ ಅತ್ಯುತ್ತಮ ಸಂಘಟನಾ ಪ್ರಶಸ್ತಿ ಪುರಸ್ಕೃತ ಸಾಮಾಜಿಕ ಸಂಸ್ಥೆ

# ಸಂಗೀತ ಭಾರತಿ ಸಾಧಕರಿಗೆ ಸ್ಫೂರ್ತಿ



■ ಎಂ.ಎಂ.ಶಿವಪ್ರಕಾಶ ಹೊಸಪೇಟೆ



ಸಂಗೀತ ಭಾರತಿ ಹೊಸಪೇಟೆ ಇದೊಂದು "ಸಾಂಸ್ಕೃತಿಕ ಕಲಾಕ್ಷೇತ್ರ". ಸ್ವಸ್ಥ ಸಮಾಜಕ್ಕಾಗಿ ಈ ಸಂಸ್ಥೆ ಶಂಕರತತ್ವ ಹೆಸರಿನ ಮಾಸಿಕ ಚಿಂತನ ಕಾರ್ಯಕ್ರಮದ ಮೂಲಕ ಧಾರ್ಮಿಕ, ಆಧ್ಯಾತ್ಮಿಕ, ಸಾಹಿತ್ಯಿಕ, ರಂಗಭೂಮಿ, ಜನಪದ, ಸಂಗೀತ, ನೃತ್ಯ ಮೊದಲಾದ ಸಾಂಸ್ಕೃತಿಕ ಕಾರ್ಯಗಳನ್ನು ಏರ್ಪಡಿಸಿಕೊಂಡು ಬರುತ್ತಿದೆ. ಇದರ ಜೊತೆಯಲ್ಲೇ ಹೊಸ ಹೊಸ ಪ್ರಯೋಗಗಳ ಮೂಲಕ ನಾಡಿನ ಬಹುದೊಡ್ಡ ಸಾಹಿತಿ ಕಲಾವಿದರು, ಪ್ರಸಿದ್ಧ ಗಾಯಕ ಗಾಯಕಿಯರು, ಸೈನಿಕರು, ರೈತರು, ಗ್ರಾಮೀಣ ಪ್ರದೇಶದ ಎಲೆಮರೆಯ ಪ್ರತಿಭೆಗಳು, ಬಾಲಪ್ರತಿಭೆಗಳನ್ನು ಗುರುತಿಸುವುದಷ್ಟೇ ಅಲ್ಲ, ಶ್ರಮಿಕರು, ಸ್ಮಶಾನ ಕಾರ್ಮಿಕರ ಕಾರ್ಯವನ್ನು ಸಹ ಅದರಲ್ಲೂ ಕೋವಿಡ್ ಸಂದ ರ್ಭದ ಕಾರ್ಯಗಳನ್ನು ಗುರುತಿಸಿ, ಯಾವುದೇ ಮಡಿವಂತಿಕೆ ಇಲ್ಲದೆ ಅವರನ್ನು ತನ್ನ ವೇದಿಕೆಗೆ ಕರೆತಂದು ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಿ ಪ್ರೋತ್ಸಾಹಿಸುತ್ತಿರುವ ವಿಭಿನ್ನ ಹಾಗೂ ವಿಶಿಷ್ಟವಾದ ಸಾಂಸ್ಕೃತಿಕ ಸಂಸ್ಥೆ ಯಾಗಿದೆ. ಯಾವುದೇ ಪ್ರತಿಫಲಪೇಕ್ಷವಿಲ್ಲದೆ ಪ್ರತಿ ತಿಂಗಳ ಕೊನೆಯ ಭಾನುವಾರದಂದು ಸಂಜೆ ಯಾರೇ ಬರಲಿ ಬಾರದೇ ಇರಲಿ, ಯಾರಿಂದಲೂ ಏನನ್ನು ನಿರೀಕ್ಷಿಸದೆ, ಬಯಸದೆ, ತಮ್ಮ ದುಡಿಮೆ ಕಾಲು ಭಾಗವನ್ನು ಈ ಕಾರ್ಯಕ್ರಮಕ್ಕೆ ವೆಚ್ಚ ಮಾಡುತ್ತಾ ಏನೇ ತೊಂದರೆ ತಾಪತ್ರಯಗಳು ಇದ್ದರು ತನ್ನ ಕಾರ್ಯವನ್ನು ನಿಗದಿತ ಸಮಯಕ್ಕೆ ಪ್ರಾರಂಭಿಸಿ ಮುಕ್ತಾಯಗೊಳಿಸುವುದನ್ನು ಕಾಯಕದಂತೆ ಕಳೆದ 399 ತಿಂಗಳು ನಿರ್ವಹಿಸಿಕೊಂಡು ಬಂದಿದ್ದಾರೆ ಹೆಚ್. ಪಿ. ಕಲ್ಲಂಭಟ್ ಹಾಗೂ ಸಹೋದರರು. ಈ ಸಂಸ್ಥೆ ಧಾರ್ಮಿಕ, ಅಧ್ಯಾತ್ಮಿಕ, ಲಲಿತ ಕಲಾ ಕ್ಷೇತ್ರಕ್ಕೆ, ಸಾಹಿತ್ಯಕ್ಕೆ, ಸಮಾಜಕ್ಕೆ ನೀಡಿದ ಕೊಡುಗೆ ಅನನ್ಯವಾದದ್ದಾಗಿದೆ. ಸಾಧಕರುಗಳನ್ನ, ಅರಳುವ ಪ್ರತಿಭೆಗಳನ್ನು, ಪ್ರತಿಭಾವಂತ ಎರಡರಿಂದ ಮೂರು ಸಾವಿರಕ್ಕೂ ಹೆಚ್ಚು ಪತಿಭೆಗಳನ್ನು ವೇದಿಕೆಗೆ ಕರೆತಂದು ಪ್ರಶಸ್ತಿಗಳನ್ನು ನೀಡಿ ಗೌರವಿಸಿದ ಹೆಗ್ಗಳಿಕೆ. ಸರಕಾರ ಅಥವಾ ಯಾವುದೇ ಸಂಸ್ಥೆಯು ಮಾಡಲಾರದ ಕಾರ್ಯವನ್ನು ಹೊಸಪೇಟೆ ಸಂಗೀತ ಭಾರತಿ ಮಾಡಿತೋರಿಸಿದೆ. ಇದೇ ಏ.27ರಂದು 400 ರ ಮಾಸಿಕ ಚಿಂತನ ಕಾರ್ಯಕ್ರಮವನ್ನು ಮಲ್ಲಿಗೆ ಹೋಟೆಲ್ ನಲ್ಲಿ ಹಮ್ಮಿಕೊಳ್ಳಲಾಗಿದೆ. ವಿಶೇಷ ಸಂಚಿಕೆಯ ಸಂಭ್ರದ ಹಿನ್ನೆಲೆಯಲ್ಲಿ ಸಂಗೀತ ಭಾರತಿಯ ಕಾರ್ಯಕುರಿತ ಒಂದು ಪರಿಚಯ.

"ದೈವತ್ವದ ಮನಸ್ಸುಗಳ ದಿವ್ಯ ಸಾನಿಧ್ಯದಲ್ಲಿ ಶಂಕರ ತತ್ವ" ಎನ್ನುವ ಘೋಷ ವಾಕ್ಯದೊಂದಿಗೆ ಸಂಗೀತ ಭಾರತೀಯು ಕಾರ್ಯನಿರ್ವಹಿಸಿಕೊಂಡು ಬರುತ್ತಿದೆ. ಆದರೆ ಯಾವುದೇ ಒಂದು ಧರ್ಮ, ಜಾತಿ, ವ್ಯಕ್ತಿ, ಕಲೆಗೆ ಮಾತ್ರ ಸೀಮಿತವಾಗದೆ, ಸಮಸ್ತ ಸರ್ವ ಧರ್ಮ, ಜನಾಂಗಗಳ ಸಾಧಕರನ್ನು, ಯುವಪ್ರತಿಭೆಗಳನ್ನು, ಬಾಲಪ್ರತಿಭೆಗಳನ್ನು ಗುರುತಿಸುವ ಹಾಗೂ ಅವರ ಪ್ರತಿಭೆಗಳಿಗೆ ಅವಕಾಶವನ್ನು ಕಲ್ಪಿಸುವ ಮುಕ್ತಮನಸ್ಸಿನ ವೇದಿಕೆಯಾಗಿದೆ. ಪ್ರತಿ ತಿಂಗಳ ಮಾಸಿಕ ಚಿಂತನ ಸಂಭ್ರಮದಲ್ಲಿ ಇಂತಹ ಸಾಧಕರನ್ನು ಹುಡುಕಿ ಕರೆತಂದು ಅವರನ್ನು ಪರಿಚಯಿಸಿ, "ಸಮಾಜಸೇವಾ ಭಾರ್ಗವ ಪ್ರಶಸ್ತಿ" ಹಾಗೂ "ಆದಿಗುರು ಶಂಕರ ಪ್ರಶಸ್ತಿ" ನೀಡಿ ಸತ್ಕರಿಸುವ ಕಾರ್ಯವನ್ನು ಸಂಗೀತ ಭಾರತಿ 399 ಸಂಚಿಕೆಗಳಿಂದ ಮಾಡಿಕೊಂಡು ಬಂದಿದೆ. ಈಗ ದಾಖಲೆ ಎನ್ನುವಂತೆ 400 ನೇ ಮಾಸಿಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಸಂಗೀತ ಭಾರತೀಯು ಕೇವಲ ಸನ್ಮಾನಿಸುವ ಕಾರ್ಯವನ್ನು ಅಷ್ಟೇ ನಿರ್ವಹಿಸುತ್ತಿಲ್ಲ. ಮಕ್ಕಳಿಗೆ ಸಂಗೀತದ ಆಸಕ್ತಿ, ಸಂಸ್ಕಾರವನ್ನು ಸಹ ನೀಡುತ್ತಿದೆ. ಹಾಡುಗಾರಿಕೆ, ನೃತ್ಯ, ಕಾರ್ಯಕ್ರಮ ನಿರೂಪಣೆ ಹೀಗೆ ಹಲವಾರು ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳ ಆಸಕ್ತಿಯಂತೆ ಅವರ ಪ್ರತಿಭೆಯನ್ನು ಗುರುತಿಸಿ ವೇದಿಕೆಯಲ್ಲಿ ಅವಕಾಶವನ್ನು ಕೊಟ್ಟು ಅವರ ಪ್ರತಿಭೆಗಳನ್ನು ಸಮಾಜಕ್ಕೆ ಪರಿಚಯಿಸುತ್ತಿದೆ. ಯುವ ಝೇಂಕಾರ, ನಾದಲೋಕದ ಕೋಗಿಲೆಗಳು, ಭಾವ ಸಂಜೆ ಮೊದಲಾದ ಕಾರ್ಯಕ್ರಮಗಳ ಮೂಲಕ ಈ ವೇದಿಕೆ ಮೇಲೆ ಕಲಿತ ಎಷ್ಟೋ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಹಾಗೇನೆ ಆಕಾಶವಾಣಿ, ಟಿವಿ ರಿಯಾಲಿಟಿ ಶೋಗಳಲ್ಲಿ ಭಾಗವಹಿಸಿ ಯಶಸ್ಸು ಕಂಡಿದ್ದಾರೆ. ಹೊಸಪೇಟೆಯ ಹಲವಾರು ಸಾಂಸ್ಕೃತಿಕ ಮನಸ್ಸುಗಳಿಗೆ ಈ ವೇದಿಕೆ ಭದ್ರಬುನಾದಿಯಾಗಿದೆ.

ಸಂಗೀತ ಕಾರ್ಯಕ್ರಮದ ಜೊತೆಗೆ ಶ್ರಾವಣ ಉತ್ಸವ, ಕಾರ್ತಿಕೋತ್ಸವ, ಕವಿಗೋಷ್ಠಿ, ವಿಚಾರ ಸಂಕಿರಣಗಳು, ಸಂಗೀತ ನೃತ್ಯ ಕಾರ್ಯಕ್ರಮಗಳು, ದಾಸ ಸಾಹಿತ್ಯ, ವಚನ ಸಾಹಿತ್ಯ ಮಂಕುತಿಮ್ಮನ ಕಗ್ಗ, ಕನಕದಾಸರ ಹರಿಭಕ್ತಿಸಾರ, ಭಗವದ್ಗೀತೆಯ ವಿಶೇಷ ಚಿಂತನೆಗಳು, ಕನ್ನಡದ ಸಾಹಿತ್ಯ, ಕವಿ ಕಾವ್ಯ ಪರಿಚಯ. ಪಂಪನಿಂದ ಕುವೆಂಪುರವರೆಗೂ ಸಾಹಿತ್ಯ ದಿಗ್ಗಜರ ಸಾಹಿತ್ಯ ಕುರಿತ ಉಪನ್ಯಾಸಗಳನ್ನು ನೆಡೆಸಿಕೊಟ್ಟಿದೆ. ಇಷ್ಟೇ ಅಲ್ಲದೆ ಸಂಗೀತ ಭಾರತೀಯ ಅಂಗ ಸಂಸ್ಥೆಯಾದ ಆದಿ ಗುರು ಶ್ರೀ ಶಂಕರ ಸಾಹಿತ್ಯ ಪರಿಷತ್ ಮೂಲಕವೂ ಮೌಲ್ಯಯುತ ಕೃತಿಗಳನ್ನು ಪ್ರಕಟಿಸಿದೆ. ಸಂಗೀತ ಭಾರತಿ ನೂರರ ನೆನಪು, ಶ್ರೀ ಭಗವದ್ಗೀತೆ ವಿಶೇಷ ಚಿಂತನೆಗಳು, ಶ್ರೀ ಶಂಕರರ ಸಾಧನೆ ಮೊದಲಾದ ಸಾಹಿತ್ಯ ಕೃತಿಗಳನ್ನು ಸಹ ಪ್ರಕಟಿಸಿದೆ.

ಸಂಗೀತ ಭಾರತೀಯು 20 ವರ್ಷಗಳಿಂದ ಹೊಸಪೇಟೆಯ ಮಹಿಳಾ ಸಮಾಜ ಶಾಲೆಯ ವೇದಿಕೆಯಲ್ಲಿ ತನ್ನೆಲ್ಲ ಸಾಂಸ್ಕೃತಿಕ ಕಾರ್ಯಗಳನ್ನು ನಿರ್ವಹಿಸಿ ಕೊಂಡು ಬರುತ್ತಿದೆ. ಹಾಗೆಂದ ಮಾತ್ರಕ್ಕೆ ಅದು ಕೇವಲ ಹೊಸಪೇಟೆಗೆ ಸೀಮಿತವಾಗಿಲ್ಲ. ರಾಜ್ಯಮಟ್ಟದಲ್ಲಿ ದೇಶದಲ್ಲಿ ಗುರುತಿಸಿಕೊಂಡ ಹಲವಾರು ಪ್ರಸಿದ್ಧ ಗಾಯಕರು, ಕಲಾವಿದರು, ಸಾಹಿತಿಗಳು, ಸಮಾಜ ಸೇವಕರು, ವೈದ್ಯರು, ವಿಜ್ಞಾನಿಗಳು, ಪರಿಸರ ವಾದಿಗಳು ಹೀಗೆ ಹಲವು ರಂಗಗಳ ದಿಗ್ಗಜರುಗಳನ್ನು ಹುಡುಕಿಕೊಂಡು ಅವರ ಮನೆ ಬಾಗಿಲಿಗೆ ಹೋಗಿ ಪ್ರಶಸ್ತಿ ನೀಡಿ ಗೌರಸಿದೆ. ಇಂಥಹ ಮಹಾನ್ ಸಾಧಕರ ಸಾಲಿನಲ್ಲಿ ಡಾ. ಪುಟ್ಟರಾಜ ಗವಾಯಿಗಳು, ಪಿ.ಬಿ.ಶ್ರೀನಿವಾಸ್, ಡಾ. ರಾಜಕುಮಾರ, ಎಸ್. ಪಿ ಬಾಲಸುಬ್ರಮಣ್ಯಂ, ಸಿ ಅಶ್ವಥ್, ಎಸ್.ಜಾನಕಿ, ಶಿವಮೊಗ್ಗದ ಸುಬ್ಬಣ್ಣ, ಶಿವರಾಂ, ಸದಾಶಿವ ಬ್ರಹ್ಮಾವರ, ಮಾಸ್ಟರ್ ಹಿರಣ್ಣಯ್ಯ, ಅರ್ಜುನ ಜನ್ಯ ಮೊದಲಾದವರು. ಮಠಾಧೀಶರುಗಳಾದ ಹಂಪಿಯ ವಿದ್ಯಾರಣ್ಯರು, ಶೃಂಗೇರಿಯ ಜಗದ್ಗುರುಗಳು, ಮಂತ್ರಾಲಯ ಮಠದ ಜಗದ್ಗುರುಗಳು, ವೀರೇಂದ್ರ ಹೆಗಡೆ, ಕೊಟ್ಟೂರು ಸ್ವಾಮಿಗಳು ಹೊಸಪೇಟೆ ಹೀಗೆ ಧರ್ಮ ಕಾರ್ಯವನ್ನು ನಿರ್ವಹಿಸುತ್ತಿರುವವರಿಗು ಸಂಗೀತ ಭಾರತಿ ಗೌರವಿಸಿದೆ. ಕವಿಗಳಾದ ಚೆನ್ನವೀರ ಕಣವಿ, ಸಜ್ಜನ ರಾಜಕಾರಣಿ ಎಂ ಪಿ. ಪ್ರಕಾಶ್, ಆನಂದ್ ಸಿಂಗ್, ನ್ಯಾಯವಾದಿ ಅಶೋಕ ಹಾರನಹಳ್ಳಿ ಹೀಗೆ ಈ ವೇದಿಕೆಯಲ್ಲಿ ಇದುವರೆಗೆ ಸುಮಾರು ಸಾವಿರಾರು ಜನರನ್ನು ಗೌರವಿಸಿ ಪ್ರಶಸ್ತಿ ನೀಡಿದ ಹೆಗ್ಗಳಿಕೆ ಸಂಗೀತ ಭಾರತಿಗೆ ಸಲ್ಲುತ್ತದೆ. ಧಾರ್ಮಿಕ, ಸಾಹಿತ್ಯ, ಸಂಗೀತ, ಚಲನಚಿತ್ರ, ಸಮಾಜಸೇವೆ ಹೀಗೆ ಎಲ್ಲ ರಂಗಗಳ ಸಾಧಕರನ್ನು ಗೌರವಿಸಿದ ರಾಜ್ಯದ ಏಕೈಕ ಸಂಸ್ಥೆಯೆಂದರೆ ಅದು ಸಂಗೀತ ಭಾರತಿ. ಇಷ್ಟೊಂದು ಸಾವಿರ ಸಾವಿರ ಸಂಖ್ಯೆಯಲ್ಲಿ ಸಾಧಕರನ್ನು ಗುರುತಿಸಿ ಹಾಗೂ ಸಾಧನೆ ಮಾಡುವ ಹಾದಿಯಲ್ಲಿರುವವರನ್ನು ಗುರುತಿಸಿ ಹೆಚ್ಚಿನ ಆಸಕ್ತಿಯಿಂದ ಸಮಾಜಸೇವೆಯನ್ನು ಮಾಡುವ ಮನೋಭಾವ ಬೆಳೆಯುವಂತೆ ಮಾಡುವಲ್ಲಿ ಸಂಗೀತ ಭಾರತೀಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈ ವೇದಿಕೆಯ ಗೌರವ, ಪ್ರಶಸ್ತಿಯನ್ನು ಪಡೆಯದ ಕಲಾವಿದರೆ ಇಲ್ಲ

## ಸಾಧಕರ ಸಾಧಕ ಕಲ್ಲಂಭಟ್

ಒಂದು ಒಳ್ಳೆಯ ಆಚಾರದಂತೆ ಬದುಕು, ಒಳ್ಳೆಯ ವಿಚಾರದಂತೆ ವ್ಯಕ್ತಿತ್ವ ಎಂಬ ಮಾತಿಗೆ ಹಾಗೂ ಬಹುಮುಖ ಪ್ರತಿಭೆ ಮತ್ತು ಕ್ರಿಯಾಶೀಲತೆಗೆ ಹೆಚ್. ಬಿ. ಕಲ್ಲಂಭಟ್ ಸಾಕ್ಷಿಯಾಗಿದ್ದಾರೆ. ವೃತ್ತಿಯಲ್ಲಿ ವಕೀಲರಾಗಿರುವ ಇವರು ಪ್ರೌವೃತ್ತಿಯಿಂದ, ಗಾಯಕರಾಗಿ, ಸಂಗೀತಗಾರರಾಗಿ, ಬರಹಗಾರರಾಗಿ, ಅಧ್ಯಾತ್ಮವಾದಿಗಳಾಗಿ, ವಾಗ್ಮಿಯಾಗಿ, ಅನುಭಾವಿಯಾಗಿ, ಸಂಗೀತ ಭಾರತಿಯ ಮುಂಜಾನೆ ಮಾತು ಮೂಲಕ ಸರಳ ಬದುಕಿನ ಸೂತ್ರಗಳನ್ನು ಹೇಳುತ್ತ, ಸಾಂಸ್ಕೃತಿಕ ಸಂಘಟಕರಾಗಿ, ಹೊಸಪೇಟೆ ಆಕಾಶವಾಣಿ ಕೇಂದ್ರದ ಜನಪ್ರಿಯ ನಿರೂಪಕರಾಗಿ, ಸಮಾಜ ಸೇವಕರಾಗಿ, ಬಾವಿಕಟ್ಟಿ ಹನುಮಂತಪ್ಪಜ್ಜರ ಹೆಸರಲ್ಲಿ ಅನುಭಾವದ ಮಾತುಗಳನ್ನು ಬರೆಯುತ್ತ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವವರು.. ಗೀತ ರಚನಕಾರರ ಬಗ್ಗೆ ಸಂಗೀತಗಾರರ ಬಗ್ಗೆ .ಗೀತೆಗಳ ರಚನೆ ಹಾಗೂ ಸಂಗೀತಸಂಯೋಜನೆ ಬಗ್ಗೆ ವಿಶೇಷವಾದ ಮಾಹಿತಿಗಳನ್ನು ಸಂಗ್ರಹಿಸಿ ಆಕಾಶವಾಣಿ ಕೇಳುಗರಿಗೆ ಅಮೂಲ್ಯ ಮಾಹಿತಿ ನೀಡಿದ ಶ್ರೇಯಸ್ ಇವರಿಗೆ ಸಲ್ಲುತ್ತದೆ. ಇವರು ಪೂರ್ಣಪ್ರಮಾಣದಲ್ಲಿ ವಕೀಲ ವೃತ್ತಿಯಲ್ಲೇ ಸಿವಿಲ್/ ಕ್ರಿಮಿನಲ್ ಲಾಯರ್ ಆಗಿ ಮುಂದುವರೆದಿದ್ದರೆ ಹೊಸಟೇಟೆಯಲ್ಲಿ ಲೀಡಿಂಗ್ ಲಾಯರ್ ಆಗಿ ಲಕ್ಷಾಂತರ ರೂಪಾಯಿಗಳ ಆಸ್ತಿ ಪಾಸ್ತಿಗಳನ್ನು ಮಾಡಿಕೊಂಡು ಹಾಯಾಗಿ ತಮ್ಮ ಕುಟುಂಬವನ್ನು ನಿರ್ವಹಿಸಿಕೊಂಡು ಹೋಗಬಹುದಿತ್ತು. ಆದರೆ ಅವುಗಳನ್ನೆಲ್ಲ ಕೈ ಬಿಟ್ಟು ತಮ್ಮ ತಂದೆಯವರಿಗೆ ಕೊಟ್ಟ ವಚನದಂತೆ ತಾವು ಹಾಗೂ ತಮ್ಮ ಸಹೋದರರೊಂದಿಗೆ ಸಮಾಜಕ್ಕಾಗಿ ತಮ್ಮಗಳ ಬದುಕನ್ನು ಅರ್ಪಿಸಿಕೊಂಡಿದ್ದಾರೆ. ಕಳೆದ 34 ವರ್ಷಗಳಿಂದ ಕಲ್ಲಂ ಭಟ್ ಹಾಗೂ ಅವರ ಸಹೋದರರು ತಮ್ಮ ದುಡಿಮೆಯ ಕಾಲು ಭಾಗ ಹಣವನ್ನು ಸಮಾಜ ಸೇವೆಗೆ ಮೀಸಲಿಟ್ಟು ಸಂಗೀತ ಭಾರತೀ ಎಂಬ ಸಾಂಸ್ಕೃತಿಕ ರಥವನ್ನು ಶಿಸ್ತುಭದ್ಧವಾಗಿ, ಸಮರ್ಥವಾಗಿ ಎಳೆದುಕೊಂಡು ಬರುತ್ತಿದ್ದಾರೆ. ಇದು ನಿಜಕ್ಕೂ ಅಪರೂಪದಲ್ಲೇ ಅಪರೂಪದ ಮಾದರಿ ಸಮಾಜ ಸೇವೆಯಾಗಿದೆ. ಕಲ್ಲುಂ ಭಟ್ ಅವರ ತಂದೆಯವರು, ಮಕ್ಕಳಿಗೆ ಕಾರ್ಯಕ್ರಮ ವ್ಯಾಪಾರ ಆಗಬಾರದು, ಕಾರ್ಯಕ್ರಮ ಕುರಿತು ಯಾರನ್ನು ಏನನ್ನು ಕೇಳುವಂತಿಲ್ಲ ಪ್ರೀತಿಯಿಂದ ಸಹಾಯ ಮಾಡಿದರೆ ಅದನ್ನು ಸ್ವೀಕರಿಸಬೇಕು, ಅದು ದುರುಪಯೋಗ ಆಗಬಾರದು. ಸಾಧಕರನ್ನು ಸಾಧನೆ ಮಾಡುವಂತಹ ಪ್ರತಿಭೆಗಳಿಗೆ ಇದು ವೇದಿಕೆಯಾಗ ಬೇಕು. ಇದು ಸಮಾಜಕ್ಕೆ ಸೇರಿದ್ದು ಎಲ್ಲರಿಂದ ಎಲ್ಲರಿಗಾಗಿ. ಕಾರ್ಯಕ್ರಮಕ್ಕೆ ಬರಲು ಆಮಂತ್ರಣ ಕೊಡುವುದು ನಿಮ್ಮ ಕೆಲಸ, ಬರುವುದು ಬಿಡುವುದು ಅವರಿಗೆ ಬಿಟ್ಟದ್ದು. ಯಾವತ್ತೂ ಯಾರನ್ನು ಯಾವ ಕಾರಣಕ್ಕೂ ದ್ವೇಷಿಸಬಾರದು. ಪ್ರಚಾರವನ್ನು ಬಯಸಲೇ ಬಾರದು ಎಂಬ ಸಲಹೆ ಮಾರ್ಗದರ್ಶನ ಗಳನ್ನು ಸದಾ ಕಿವಿಯಲ್ಲಿ, ಮನಸ್ಸಿನಲ್ಲಿ ತುಂಬಿಕೊಂಡು ಅಕ್ಷರ ಸಹ ತಪ್ಪದೇ ಸಂಗೀತ ಭಾರತೀಯನ್ನು ಕಲ್ಲಂ ಭಟ್ಟರು ಹಾಗೂ ಸಹೋದರರು ಮುನ್ನೆಡಿಸಿಕೊಂಡು ಬರುತ್ತಿದ್ದಾರೆ. ತಂದೆಯ ಆಶೀರ್ವಾದದ ಜೊತೆಗೆ 93 ವರ್ಷ ವಯಸ್ಸಿನ ತಾಯಿ ಶ್ರೀಮತಿ ಹೆಚ್. ಪಿ. ಮಾಲತಿಬಾಯಿ ಇವರ ಶುಭ ಹಾರೈಕೆ ಸಹ ಇವರ ಮೇಲಿದೆ. ಶತಮಾನದ ಹತ್ತಿರವಿರುವ ತಾಯಿ, ಮಕ್ಕಳು, ಸೊಸೆ ಯಂದಿರು, ಮೊಮ್ಮಕ್ಕಳು ಎಲ್ಲರು ಸೇರಿ ಸಂಗೀತ ಭಾರತಿಯನ್ನು ಮುನ್ನೆಡೆಸುತ್ತಿದ್ದಾರೆ. ಸಾವಿರಾರು ಸಾಧಕರನ್ನು ಕರೆತಂದು ವೇದಿಕೆ ಮೇಲೆ ಗೌರವಿಸುವ ಎಚ್.ಪಿ. ಕಲ್ಲಂಭಟ್ಟರು ಸಾಧಕರ ಸಾಧಕನೆ ಆಗಿದ್ದಾರೆ. ಒಬ್ಬ ವ್ಯಕ್ತಿಯಾಗಿ, ಶಕ್ತಿಯಾಗಿ ಸಂಸ್ಥೆಯಾಗಿ



ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಇವರ ಸೇವಾ ಕಾರ್ಯವನ್ನು ಗುರುತಿಸಿ ಸಂಘ ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಆದರೆ ಸರಕಾರ ಇವರ ಕಾರ್ಯವನ್ನು ಗುರುತಿಸಿ ಪ್ರಶಸ್ತಿ ಪದವಿಗಳನ್ನು ನೀಡಿ ಪ್ರೋತ್ಸಾಹಿಸಬೇಕಿದೆ.

ಎನ್ನುವಂತಾಗಿದೆ.! ಇದು ನಿಜಕ್ಕೂ ವಿಜಯನಗರ ಜಿಲ್ಲೆ ಹಾಗೂ ನಾಡಿನ ಹೆಮ್ಮೆಯ ಸಾಂಸ್ಕೃತಿಕ ಸಂಸ್ಥೆಯಾಗಿದೆ.

## ನಡೆದು ಬಂದ ಹಾದಿ..........

ಶ್ರೀ ಶಂಕರರ ಆಧ್ಯಾತ್ಮಿಕ ಚಿಂತನೆ, ವಿಚಾರಗಳಿಂದ ಮನುಷ್ಯನ ಅಂತರಂಗವನ್ನು ಮುಟ್ಟಿ ಜನರನ್ನು, ಸಮಾಜವನ್ನು ಮಾನವೀಯ ಮೌಲ್ಯಗಳೊಂದಿಗೆ ಸರ್ವರ ಹಿತವನ್ನು ಬಯಸಿ ಎಲ್ಲರೂ ಎಲ್ಲರಿಗಾಗಿ ಎಂಬ ಧ್ಯಯದೊಂದಿಗೆ 1962 ರಲ್ಲಿ ಸಂಗೀತ ಭಾರತಿ ಹಾಗೂ ಆದಿ ಗುರು ಶ್ರೀ ಶಂಕರ ಸಾಹಿತ್ಯ ಪರಿಷತ್ ಗಳನ್ನು ಹೊಸಪೇಟೆಯ ಹೆಚ್. ಪುಟ್ಟ ಭಟ್ಟರು ಪ್ರಾರಂಭಿಸಿದ್ದರು. ಇವರು ಧಾರ್ಮಿಕ, ಆಧ್ಯಾತ್ಮಿಕ, ಸಾಹಿತ್ಯಿಕ, ಸಂಗೀತ ಪರಂಪರೆಯಲ್ಲಿ ಬೆಳೆದು ಬಂದವರು. ಇವರು ಈ ಸಾಂಸ್ಕೃತಿಕ ಸಂಸ್ಥೆಗಳನ್ನು ಸ್ಥಾಪಿಸಿದ್ದವರು. ಇವುಗಳ ಮೂಲಕ ಅವಕಾಶ ವಂಚಿತರಾದ ಹಲವಾರು ಸಾಧಕರನ್ನು ಗೌರವಿಸಿದ್ದವರು. 1962ರಿಂದ 1990ರ ವರೆಗೆ ವರ್ಷಕ್ಕೆ ಎರಡು ಕಾರ್ಯಕ್ರಮಗಳಂತೆ 28 ವರ್ಷಗಳ ಕಾಲ ಯಾವುದೇ ಪ್ರಚಾರವಿಲ್ಲದೆ ಸರಳ ರೀತಿಯಲ್ಲಿ ಮುನ್ನಡೆಸಿಕೊಂಡು ಬಂದಿದ್ದವರು. ಏಕಾಏಕಿ ಒಂದು ದಿನ ತಮ್ಮ ಮಕ್ಕಳನ್ನು ಕರೆದು ಈ ಸಂಗೀತ ಭಾರತಿಯನ್ನು ನಿಲ್ಲಿಸೋಣ ಎಂದಾಗ ಇವರ ಮಕ್ಕಳಾದ ಹೆಚ್. ಪಿ.ಕಲ್ಲಂ ಭಟ್‌ರು, ಹೆಚ್.ಪಿ. ಶಿವಶಂಕರ್, ಹೆಚ್.ಪಿ.ವಿಶ್ವನಾಥ್ ಭಟ್ಟರು, ಹೆಚ್.ಪಿ. ಶಿವಕುಮಾರ್ ಇವರು ಇದನ್ನು ನಿಲ್ಲಿಸುವುದು ಬೇಡಾ ಇನ್ನು ಮುಂದೆ ಸಂಗೀತ ಭಾರತೀಯ ಸಾಂಸ್ಕೃತಿಕ ರಥವನ್ನು ನಾವು ಮುನ್ನಡೆಸುತ್ತೇವೆ ಎಂಬ ಮಾತನ್ನು ತಮ್ಮ ತಂದೆಗೆ ಕೊಟ್ಟರು. ತಾವು ವರ್ಷಕ್ಕೆ ಎರಡು ಕಾರ್ಯಕ್ರಮಗಳನ್ನು ಮಾಡಿದ್ದೀರಿ ಆದರೆ ನಾವು ಪ್ರತಿ ತಿಂಗಳು ಕೊನೆಯ ಭಾನುವಾರ ತಪ್ಪದೇ ಈ ಕಾರ್ಯಕ್ರಮವನ್ನು ನಡೆಸುತ್ತೇವೆ ಎಂಬ ಆಶ್ವಾಸನೆಯನ್ನು ಮತ್ತು ಸಂಕಲ್ಪವನ್ನು ಮಾಡಿದರು. ಇದರ ಫಲವಾಗಿಯೇ 1992 ರಂದು ಧಾರ್ಮಿಕ ಕ್ಷೇತ್ರ ಹೊಸೂರಿನ ಶ್ರೀ ಹೊಸೂರಮ್ಮನ ಸಾನಿಧ್ಯದಲ್ಲಿ ಸಂಗೀತ ಭಾರತಿಗೆ ಮತ್ತೆ ಪುನರ್ ಚಾಲನೆಯನ್ನು ನೀಡಲಾಯಿತು. ಅಲ್ಲಿಂದ ಇಲ್ಲಿಯವರೆಗೆ ಒಂದು ತಿಂಗಳು ತಪ್ಪದೇ ಕಾರ್ಯಕ್ರಮವನ್ನು ನಡೆಸಿಕೊಂಡು ಬಂದಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಆನ್ಲೈನ್ ಮೂಲಕ ಕಾರ್ಯಕ್ರಮವನ್ನು ನಿರ್ವಹಿಸಿ ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ.

## ಜೊತೆಯಲ್ಲಿ ದೈವತ್ವದ ಮನಸ್ಸಗಳು

ಸಂಗೀತ ಭಾರತೀಯ 33 ವರ್ಷಗಳ ಸುದೀರ್ಘ ಪಯಣದಲ್ಲಿ ಹೊಸಪೇಟೆಯ ಹಲವಾರು ದೈವತ್ತದ ಮನಸ್ಸುಗಳು ಇವರೊಂದಿಗೆ ಕೈಜೋಡಿಸಿವೆ. ಒಂದು ರೀತಿಯಲ್ಲಿ ಹೊಸಪೇಟೆ ನಗರವೇ ಸಂಗೀತ ಭಾರತೀಯ ಬೆಂಬಲಕ್ಕೆ ಇದೆ ಎಂದರೆ ಅತಿಶಯೋಕ್ತಿ ಆಗಲಾರದು. ಪ್ರತಿ ತಿಂಗಳ ಆಮಂತ್ರಣ ಪತ್ರಿಕೆ ಮುದ್ರಣ,ಶಾಲು, ನೆನಪಿನ ಕಾಣಿಕೆ, ವೇದಿಕೆಗೆ ಬೆಳಕಿನ ವ್ಯವಸ್ಥೆ, ಮಹಿಳಾ ಸಮಾಜ ಶಾಲೆ ಆಡಳಿತ ಮಂಡಳಿಯಿಂದ ಸ್ಥಳಾವಕಾಶ ಹಲವಾರು ಜನ ತಮ್ಮ ತನು,ಮನ ಧನಗಳಿಂದ ಸೇವೆ ಸಲ್ಲಿಸುತ ಬಂದಿದ್ದಾರೆ.ಅವರೆಲ್ಲರನ್ನು ಇಲ್ಲಿ ದಾಖಲಿಸುವುದು ಕಷ್ಟ ಸಾಧ್ಯ. ಸಂಚಿಕೆಯ ಪ್ರಾರಂಭದಿಂದ ಇವತ್ತಿನ ವರೆಗಿನ ಪ್ರತಿ ಸಂಚಿಕೆಯಲ್ಲಿ ಪ್ರೊ. ರಾಘವೇಂದ್ರ ರಾವ್ ಅವರು ವಿಶೇಷ ಚಿಂತನೆ ಗಳನ್ನು ಉಪನ್ಯಾಸಗಳನ್ನು. ಮಾರ್ಗದರ್ಶನ ನೀಡುತ್ತ ಬೆಂಬಲಕ್ಕಿದ್ದಾರೆ. 33 ವರ್ಷಗಳ ನಿರಂತರ ಸೇವೆಯನ್ನು ಒಂದು ಲೇಖನದಲ್ಲಿ ದಾಖಲಿಸುವುದು ಕಷ್ಟದ ಕೆಲಸ. ಸಂಗೀತ ಭಾರತಿ 400 ಸಂಚಿಕೆಗಳಿಂದ 500 ಸಂಚಿಕೆಗಳನ್ನು ಕಾಣಲಿ ಹಾಗೂ ಸರ್ಕಾರ ಇವರ ನಿಸ್ವಾರ್ಥ ಸೇವೆಯನ್ನು ಗರುತಿಸಿ ರಾಜ್ಯೋತ್ಸವ ಹಾಗೂ ಇತರೆ ಪ್ರಶಸ್ತಿಗಳನ್ನು ನೀಡಿ ಗೌರವಿಸಲಿ ಎಂಬುದು ಎಲ್ಲರ ಆಶಯವಾಗಿದೆ.

# ಕುವೆಂಪು ಅವರ ಜೀವನದ ದಿಕ್ಕನ್ನೇಬದಲಿಸಿದಪ್ರಸಂಗ....

■ ಶೇಖರಯ್ಯ ಟಿ ಎಚ್ ಎಂ., ಗೆದ್ದಲಗಟ್ಟೆ

ಕುವೆಂಪು ಅವರು ಕಾವ್ಯ ರಚನೆಯ ಆರಂಭದಲ್ಲಿ ಕೆ ವಿ ಪುಟ್ಟಪ್ಪ ಎಂಬ ಹೆಸರಿನಿಂದಲೇ ಬರೆಯುತ್ತಿದ್ದರು. ಅವರು ಕನ್ನಡದಲ್ಲಿ ಪದ್ಯ ರಚನೆ ಪ್ರಾರಂಭಿಸಿದಾಗ 'ಕಿಶೋರಚಂದ್ರವಾಣಿ'ಎಂಬ ಕಾವ್ಯನಾಮವನ್ನು ಇರಿಸಿಕೊಂಡಿದ್ದರು. ಮುಂದೆ ಅದು ಕುವೆಂಪು ಎಂದಾಗಿ ಕನ್ನಡ ನಾಡಿನ ಮನೆ ಮಾತಾಗಿ ಅದು ಅಂಕಿತನಾಮವು ಆಗಿ ಹೋಯಿತು.

ಕುವೆಂಪು ಅವರು 1924ರಲ್ಲಿ ಬಿ ಎ ಪದವಿಗಾಗಿ ಮಹಾರಾಜ ಕಾಲೇಜಿಗೆ ಸೇರಿಕೊಂಡರು. ಐಚ್ಚಿಕ ವಿಷಯಗಳಾಗಿ ಮನಶ್ಶಾಸ್ತ್ರ ಮತ್ತು ತತ್ವಶಾಸ್ತ್ರವನ್ನು ಆರಿಸಿಕೊಂಡರು. ಭಾರತೀಯ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಹಲವಾರು ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿದರು.

ಇದೇ ವೇಳೆಯಲ್ಲಿ ಕುವೆಂಪು ಅವರ ಬದುಕಿನಲ್ಲಿ ಒಂದು ಪ್ರಮುಖ ಘಟನೆ ನಡೆಯಿತು. ಅದು ಅವರ ಜೀವನದ ದಿಕ್ಕನ್ನೇ ಬದಲಿಸಿದಂತಹ ಪ್ರಸಂಗವಾಯಿತು. ಕುವೆಂಪು ಅವರು ಎರಡನೇ ಬಿ ಎ ತರಗತಿಯಲ್ಲಿದ್ದಾಗ ವಿಷಮಶೀತ ಜ್ವರ ಪೀಡಿತರಾಗಿ ಹಾಸಿಗೆ ಹಿಡಿದು ಬಿಟ್ಟಿದ್ದರು. ಔಷಧೋಪಚಾರವಿಲ್ಲದೆ ಸೊರಗಿ ಹೋಗಿದ್ದರು. ದಿನವೂ ರಾಮಕೃಷ್ಣಾಶ್ರಮಕ್ಕೆ ಹೋಗಿ ಬರುತ್ತಿದ್ದ ಕುವೆಂಪು ಕೆಲವು ದಿನಗಳಿಂದ ಬಾರದೆ ಹೋದದ್ದನ್ನು ಗಮನಿಸಿದ ಸಿದ್ದೇಶ್ವರಾನಂದರು ಆತಂಕದಿಂದ ತಾವೇ ಕುವೆಂಪು ಅವರ ಕೊಠಡಿಗೆ ಹೋದರು. ಅವರ ಜೊತೆಯಲ್ಲಿ ನಾ. ಕಸ್ತೂರಿ ಅವರು ಇದ್ದರು. ಜ್ವರದ ಬಾಧೆಯಿಂದ ನಿತ್ರಾಣರಾಗಿದ್ದ ಕುವೆಂಪು ಅವರನ್ನು ತಕ್ಷಣವೇ ಸ್ವಾಮೀಜಿ ಆಸ್ಪತ್ರೆಗೆ ದಾಖಲಿಸಿದರು.

ಕುವೆಂಪು ಅವರು ಸ್ವಲ್ಪ ಮಟ್ಟಿಗೆ ಗುಣಮುಖರಾದ ಮೇಲೆ ಸ್ವಾಮೀಜಿಯವರು ಕುವೆಂಪು ಅವರನ್ನು ಆಶ್ರಮಕ್ಕೆ ಕರೆದುಕೊಂಡು ಬಂದು ಅವರಿಗೆ ಅಧ್ಯಯನಕ್ಕೆ ಅನುಕೂಲವಾಗುವಂತೆ ಒಂದು ಪ್ರತ್ಯೇಕ ಕೋಣೆಯನ್ನೇ ನೀಡಿದರು. ಮುಂದೆ ಹನ್ನೆರಡು ವರ್ಷಗಳ ಕಾಲ ಕುವೆಂಪು ಆಶ್ರಮದಲ್ಲಿಯೇ ಉಳಿದು ತಮ್ಮ ವ್ಯಾಸಂಗವನ್ನು ಮುಂದುವರಿಸಿದರು. ಅಲ್ಲಿಯೇ ತಮ್ಮ ಅನೇಕ ಮಹತ್ವದ ಕೃತಿಗಳನ್ನು ರಚಿಸಿದರು

(1). ಅಡಿ ಟಿಪ್ಪಣಿ..(1) ಕನ್ನಡದ ಕಲ್ಪತರು ಕುವೆಂಪು., ಸಿ.ಎನ್. ಕೃಷ್ಣಮೂರ್ತಿ. ಪುಟ ಸಂಖ್ಯೆ 12 ಮತ್ತು 13)


REQUIRED

Are you passionate about creativity, branding and making ideas come alive?
We're looking for dynamic individuals to join our Advertising & Marketing Team!

POSITION
- Advertising Manager
- Ad Sales Executive

LOCATION
Vijayanagara Dist.

Who can Apply:
- MBA/BBA in Marketing, Mass Communication, related fields
- Experience in media ad sales or Marketing preferred
- Freshers with strong passion for advertising are welcome too!

Submit Your CV and Portofolio :
96866 63125


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

-: ಸಂಪಾದಕರು :-

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 94486 33038


## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


### ವರ್ಚುಯಲ್ ರಿಯಾಲಿಟಿ (ವಿಆರ್) ಥೆರಪಿ

# ಮನಸ್ಸಿನ ನೋವಿಗೆ ತಂತ್ರಜ್ಞಾನದ ಮದ್ದು

## ಮಾನಸಿಕ ಆರೋಗ್ಯದ ಚಿಕಿತ್ಸೆಯಲ್ಲಿ ಹೊಸ ಭರವಸೆಯ ದೀಪ । ಭಯ ತಗ್ಗಿಸಿ ಧೈರ್ಯ ತುಂಬುವ ಚಿಕಿತ್ಸೆ



ಒತ್ತಡ, ಆತಂಕ, ಖಿನ್ನತೆ ಇಂದಿನ ಜೀವನದಲ್ಲಿ ಯಾರಿಗೆ ಈ ಮಾನಸಿಕ ಸಮಸ್ಯೆಗಳು ತಟ್ಟಿಲ್ಲ! ಭಾರತದಲ್ಲಿ ಪ್ರತಿ ಐವರಲ್ಲಿ ಒಬ್ಬ ವ್ಯಕ್ತಿಯು ಮಾನಸಿಕ ಆರೋಗ್ಯದ ಸವಾಲುಗಳನ್ನು ಎದುರಿಸುತ್ತಿದ್ದಾನೆ. ಆರಂಭದಲ್ಲಿ ದೈಹಿಕ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರವಾಗಿ ಬಳಕೆಯಾಗುತ್ತಿದ್ದ ತಂತ್ರಜ್ಞಾನವು ಈಗ ಮಾನಸಿಕ ಆರೋಗ್ಯದ ಕಡೆಗೂ ತನ್ನ ಕಣ್ಣು ಹಾಯಿಸಿದೆ. ಇದರಲ್ಲಿ ವರ್ಚುಯಲ್ ರಿಯಾಲಿಟಿ (ವಿಆರ್) ಥೆರಪಿ ಎಂಬ ಹೊಸ ಆವಿಷ್ಕಾರವು ಮನಸ್ಸಿನ ನೋವಿಗೆ ಒಂದು ವಿಶಿಷ್ಟ ಮತ್ತು ಪರಿಣಾಮಕಾರಿ ಚಿಕಿತ್ಸೆಯಾಗಿ ಮಾರ್ಪಟ್ಟಿದೆ.


**ವರ್ಚುಯಲ್ ರಿಯಾಲಿಟಿ ಎಂದರೇನು?**

ವರ್ಚುಯಲ್ ರಿಯಾಲಿಟಿ (ವಿಆರ್) ಎಂದರೆ ಕೇವಲ ತಂತ್ರಜ್ಞಾನವಲ್ಲ, ಅದು ನಿಮ್ಮನ್ನು ಸಂಪೂರ್ಣವಾಗಿ ಒಂದು ಮಾಯಾ ಜಗತ್ತಿಗೆ ಕರೆದೊಯ್ಯುವ ಜಾದೂ! ಒಂದು ಕ್ಷಣ ಕಲ್ಪಿಸಿಕೊಳ್ಳಿ: ನೀವು ವಿಶೇಷ ಕನ್ನಡಕ (ಹೆಡ್‌ಸೆಟ್) ಧರಿಸಿದ ತಕ್ಷಣ, ನೈಜ ಜಗತ್ತು ಕಣ್ಮರೆಯಾಗಿ, ನೀವು ಕಂಪ್ಯೂಟರ್ ಸೃಜಿಸಿದ ರೋಮಾಂಚಕ ಪ್ರಪಂಚದಲ್ಲಿ ಸಂಚರಿಸುತ್ತೀರಿ. ಇದು ಸಿನೆಮಾ ವೀಕ್ಷಣೆಯಂತೆ ಅಲ್ಲ. ನೀವೇ ಆ ಕಥೆಯ ನಾಯಕ! ದೃಶ್ಯಗಳು, ಶಬ್ದಗಳು, ಮತ್ತು ಸ್ಪರ್ಶದ ಅನುಭವಗಳು ನಿಮ್ಮ ಇಂದ್ರಿಯಗಳನ್ನು ತಲ್ಲೀನಗೊಳಿಸುತ್ತವೆ, ನೀವು ನಿಜವಾಗಿಯೂ ಬೇರೆ ಲೋಕದಲ್ಲಿದ್ದೀರಿ ಎಂಬ ಭಾವನೆ ಮೂಡಿಸುತ್ತವೆ. ವಿಶೇಷ ಹೆಡ್‌ಸೆಟ್‌ಗಳು ಮತ್ತು ಸೆನ್ಸರ್‌ಗಳು ಈ ಮಾಯಾಜಾಲವನ್ನು ಸಾಧ್ಯವಾಗಿಸುತ್ತವೆ, ನಿಮ್ಮನ್ನು ಆ ಭ್ರಾಮಕ ಜಗತ್ತಿನ ಒಂದು ಭಾಗವನ್ನಾಗಿ ಮಾಡುತ್ತವೆ. ನೀವು ಬೆಂಗಳೂರಿನ ಮನೆಯಲ್ಲಿ ಕುಳಿತಿದ್ದರೂ, ವಿಆರ್ ಸೃಜಿಸಿದ ಸನ್ನಿವೇಶದಲ್ಲಿ ಹಿಮಾಲಯದ ಶಿಖರದಲ್ಲಿ ಟ್ರೆಕ್ಕಿಂಗ್ ಮಾಡುತ್ತಿರಬಹುದು ಅಥವಾ ರಾಕ್ಷಸರ ಜೊತೆ ಯುದ್ಧ ಮಾಡುತ್ತಿರಬಹುದು! ಆರಂಭದಲ್ಲಿ ಗೇಮಿಂಗ್ ಮತ್ತು ಮನರಂಜನೆಯ ಜಗತ್ತನ್ನು ಆಳಿದ ಈ ತಂತ್ರಜ್ಞಾನ, ಈಗ ಮಾನಸಿಕ ಆರೋಗ್ಯದ ಚಿಕಿತ್ಸೆಗೆ ಒಂದು ಶಕ್ತಿಶಾಲಿ ಸಾಧನವಾಗಿ ಮಾರ್ಪಟ್ಟಿದೆ. ಒಂದೇ ತಂತ್ರಜ್ಞಾನ, ಆದರೆ ಅದರ ಸಾಧ್ಯತೆಗಳು ಅಪಾರ!

**ಮಾನಸಿಕ ಆರೋಗ್ಯಕ್ಕೆ ವಿಆರ್ ಥೆರಪಿ**

ಮನಸ್ಸಿನ ಸಮಸ್ಯೆಗಳಾದ ಆತಂಕ, ಭಯ, ಆಘಾತದ ನಂತರದ ಒತ್ತಡದ ಅಸ್ವಸ್ಥತೆ (ಪಿಟಿಎಸ್‌ಡಿ), ಮತ್ತು ಖಿನ್ನತೆ ಇವೆಲ್ಲವೂ ಆಧುನಿಕ ಜೀವನದಲ್ಲಿ ಸಾಮಾನ್ಯವಾಗಿವೆ. ಔಷಧಿಗಳು ಮತ್ತು ಸಮಾಲೋಚನೆ ಥೆರಪಿಗಳ ಮೇಲೆ ಸಾಂಪ್ರದಾಯಿಕ ಚಿಕಿತ್ಸೆಗಳು ಅವಲಂಬಿತವಾಗಿದ್ದವು. ಆದರೆ ವರ್ಚುಯಲ್ ರಿಯಾಲಿಟಿ ಥೆರಪಿ ಒಂದು ಹೊಸ ದಾರಿಯನ್ನು ತೋರಿಸಿದೆ. ಇದು ರೋಗಿಗಳಿಗೆ ತಮ್ಮ ಭಯವನ್ನು ಎದುರಿಸಲು, ಒತ್ತಡವನ್ನು ನಿಭಾಯಿಸಲು ಮತ್ತು ಮನಸ್ಸನ್ನು ಶಾಂತಗೊಳಿಸಲು ಒಂದು ನಿಯಂತ್ರಿತ, ಸುರಕ್ಷಿತ ಪರಿಸರವನ್ನು ಒದಗಿಸುತ್ತದೆ.

**ಎತ್ತರದ ಭಯ:** ರಾಜೇಶ್‌ಗೆ ಎತ್ತರದ ಸ್ಥಳಗಳೆಂದರೆ ಭಯ–ಲಿಫ್ಟ್‌ನಲ್ಲಿಯೇ ಉಸಿರಾಟ ಕಷ್ಟವಾಗುತ್ತದೆ. ವಿಆರ್ ಥೆರಪಿಯಲ್ಲಿ, ಅವನು ಕೃತಕವಾಗಿ ರಚಿಸಿದ ಗಗನಚುಂಬಿ ಕಟ್ಟಡದ 50ನೇ ಮಹಡಿಯ ಬಾಲ್ಕನಿಯಲ್ಲಿ ನಿಂತಿದ್ದಾನೆ. ಕೆಳಗೆ ನಗರದ ವಿಹಂಗಮ ದೃಶ್ಯ ಕಾಣುತ್ತದೆ, ಆದರೆ ಥೆರಪಿಸ್ಟ್‌ನ ಧ್ವನಿ, "ನೀವು ಸುರಕ್ಷಿತರಾಗಿದ್ದೀರಿ, ಆಳವಾದ ಉಸಿರು ತೆಗೆದುಕೊಳ್ಳಿ," ಎಂದು ಧೈರ್ಯ ತುಂಬುತ್ತದೆ. ಕ್ರಮೇಣ, ಅವನ ಭಯ ಕಡಿಮೆಯಾಗುತ್ತದೆ.



ಡಾ. ಎಸ್.ಎಂ. ಶಶಿಧರ್
ಟೆಕ್ ಪರಿಣತರು

Scan For Digital Colourful
HAMPI TIMES E-paper

**ಸಾಮಾಜಿಕ ಆತಂಕ :** ಕವಿತಾ ಐಎಎಸ್ ಪರೀಕ್ಷೆಗೆ ತಯಾರಿಯಾಗುತ್ತಿದ್ದಾಳೆ. ಅವಳಿಗೆ ಜನರ ಮುಂದೆ ಮಾತನಾಡಲು ಭಯ. ವಿಆರ್‌ನಿಂದ, ಅವಳು ತುಂಬಿದ ಸಭೆಯಲ್ಲಿ ಪ್ರಸ್ತುತಿಯನ್ನು ನೀಡುವಂತೆ ಭ್ರಾಮಕ ಸನ್ನಿವೇಶವನ್ನು ಸೃಜಿಸಲಾಗುತ್ತದೆ. ಜನ ಸಮೂಹವು ಕೃತಕವಾದರೂ, ಥೆರಪಿಸ್ಟ್‌ನ ಸಲಹೆಗಳಾದ "ನಿಧಾನವಾಗಿ ಮಾತನಾಡಿ, ಎಲ್ಲರೂ ನಿಮ್ಮನ್ನು ಬೆಂಬಲಿಸುತ್ತಿದ್ದಾರೆ" ಎಂಬ ಮಾತುಗಳು ಅವಳ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಕ್ರಮೇಣ ಕವಿತಾ ತನ್ನ ಧ್ವನಿಯನ್ನು ಕಂಡುಕೊಳ್ಳುತ್ತಾಳೆ, ಸಂದರ್ಶನಗಳನ್ನು ಎದುರಿಸಲು ಸಿದ್ಧಳಾಗುತ್ತಾಳೆ.

**ಆಘಾತದ ನಂತರದ ಒತ್ತಡದ ಅಸ್ವಸ್ಥತೆ (ಪಿಟಿಎಸ್‌ಡಿ):** ಒಬ್ಬ ಯೋಧನಿಗೆ ಯುದ್ಧದ ಘಟನೆಗಳಿಂದ ಆಘಾತವಾಗಿದೆ. ವಿಆರ್ ಥೆರಪಿಯಲ್ಲಿ, ಅವನನ್ನು ಯುದ್ಧಭೂಮಿಯ ಪರಿಸರಕ್ಕೆ ಕರೆದೊಯ್ಯಲಾಗುತ್ತದೆ, ಆದರೆ ನಿಯಂತ್ರಿತ ರೀತಿಯಲ್ಲಿ. ಥೆರಪಿಸ್ಟ್ "ನೀವು ಈಗ ಸುರಕ್ಷಿತ ಸ್ಥಳದಲ್ಲಿದ್ದೀರಿ, ಈ ಶಬ್ದಗಳು ಕೇವಲ ಕೃತಕವಾಗಿವೆ" ಎಂದು ಶಾಂತಗೊಳಿಸುತ್ತಾರೆ. ಪುನರಾವರ್ತಿತ ಸೆಷನ್‌ಗಳ ಮೂಲಕ, ಅವನ ಮೆದುಳು ಭಯದ ಪ್ರತಿಕ್ರಿಯೆಗಳನ್ನು ಮರುಪರಿಶೀಲಿಸುತ್ತದೆ, ಮನಸ್ಸು ಆಘಾತದ ಕರಿನೆರಳಿನಿಂದ ಬಿಡುಗಡೆ ಹೊಂದುತ್ತದೆ.

**ಖಿನ್ನತೆ:** ಸುಮಾಳಿಗೆ ಖಿನ್ನತೆಯಿಂದ ಜೀವನದಲ್ಲಿ ಆಸಕ್ತಿಯೇ ಇಲ್ಲ. ವಿಆರ್ ಥೆರಪಿಯು ಅವಳನ್ನು ಶಾಂತವಾದ ಕಡಲತೀರದ ಕೃತಕ ಪರಿಸರಕ್ಕೆ ಕೊಂಡೊಯ್ಯುತ್ತದೆ. ಅಲೆಗಳ ಶಬ್ದ ಮತ್ತು ಬೆಚ್ಚಗಿನ ಸೂರ್ಯನ ಬೆಳಕಿನಲ್ಲಿ, ಥೆರಪಿಸ್ಟ್‌ನ ಮಾರ್ಗದರ್ಶನದೊಂದಿಗೆ ಅವಳು ಧ್ಯಾನ ಮತ್ತು ಮೈಂಡ್‌ಫುಲ್‌ನೆಸ್ ಅಭ್ಯಾಸ ಮಾಡುತ್ತಾಳೆ. "ಪ್ರತಿ ಅಲೆಯೊಂದಿಗೆ ನಿಮ್ಮ ಮನಸ್ಸಿನಲ್ಲಿ ಉಲ್ಲಾಸ ಮೂಡುತ್ತಿದೆ," ಎಂದು ಥೆರಪಿಸ್ಟ್ ಹೇಳುತ್ತಾರೆ. ಕ್ರಮೇಣ, ಆಕೆಯ ಆಸಕ್ತಿ ಮರಳುತ್ತದೆ, ಭರವಸೆ ಚಿಗುರುತ್ತದೆ.

**ವೈಜ್ಞಾನಿಕ ಬೆಂಬಲ :** ವಿಆರ್ ಥೆರಪಿಯು ಆಕರ್ಷಕವಷ್ಟೇ ಅಲ್ಲ! – ಇದಕ್ಕೆ ವೈಜ್ಞಾನಿಕ ಬೆಂಬಲವೂ ಇದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ 2023ರ ಸಂಶೋಧನೆಯ ಪ್ರಕಾರ, ವಿಆರ್ ಥೆರಪಿಯು ಮೆದುಳಿನ ಅಮಿಗ್ಡಾಲಾದಂತಹ ಭಾವನಾತ್ಮಕ ಕೇಂದ್ರಗಳ ಮೇಲೆ ಕಾರ್ಯ ನಿರ್ವಹಿಸುತ್ತದೆ, ಭಯ ಮತ್ತು ಒತ್ತಡದ ಪ್ರತಿಕ್ರಿಯೆಗಳನ್ನು ಮರುಪ್ರೋಗ್ರಾಮ್ ಮಾಡುತ್ತದೆ. ಭಯದ ಸಮಸ್ಯೆಯಿಂದ ಬಳಲುತ್ತಿದ್ದ 70% ರೋಗಿಗಳು ಈ ಚಿಕಿತ್ಸೆಯಿಂದ ಗಮನಾರ್ಹ ಸುಧಾರಣೆ ಕಂಡಿದ್ದಾರೆ. ಅಮೆರಿಕದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್‌ನ ಒಂದು ಅಧ್ಯಯನವು ಪಿಟಿಎಸ್‌ಡಿ ರೋಗಿಗಳಲ್ಲಿ ವಿಆರ್ ಚಿಕಿತ್ಸೆಯು ಸಾಂಪ್ರದಾಯಿಕ ವಿಧಾನಗಳಿಗಿಂತ 30% ವೇಗವಾಗಿ ಫಲಿತಾಂಶ ನೀಡಿದೆ ಎಂದು ತೋರಿಸಿದೆ.

**ಸವಾಲುಗಳು:** ಭಾರತದಲ್ಲಿ ಮಾನಸಿಕ ಆರೋಗ್ಯದ ಜಾಗೃತಿ ಕ್ರಮೇಣ ಹೆಚ್ಚುತ್ತಿದ್ದರೂ, ಚಿಕಿತ್ಸೆಯನ್ನು ಹುಡುಕುವವರ ಸಂಖ್ಯೆ ಇನ್ನೂ ಕಡಿಮೆಯಿದೆ. ಕಾರಣ, ಸಾಮಾಜಿಕ ಕಳಂಕವೆಂಬ ಭಾವನೆ ಮತ್ತು ತಜ್ಞರ ಕೊರತೆ. ವಿಆರ್ ಥೆರಪಿಯು ಈ ಸವಾಲುಗಳಿಗೆ ಒಂದು ಆಧುನಿಕ ಪರಿಹಾರವಾಗ ಬಹುದು. ಉದಾಹರಣೆಗೆ, ದೂರದ ಗ್ರಾಮೀಣ ಭಾಗಗಳಲ್ಲಿ ಟೆಲಿಹೆಲ್ತ್‌ನೊಂದಿಗೆ ವಿಆರ್ ಚಿಕಿತ್ಸೆಯನ್ನು ಸಂಯೋಜಿಸಿದರೆ, ಜನರು ತಮ್ಮ ಮನೆಯಿಂದಲೇ ಗುಣಮಟ್ಟದ ಚಿಕಿತ್ಸೆ ಪಡೆಯಬಹುದು. ಆದರೆ, ವಿಆರ್ ಉಪಕರಣಗಳ ವೆಚ್ಚ ದುಬಾರಿಯಾಗಿದೆ, ತರಬೇತಿ ಪಡೆದ ತಜ್ಞರ ಕೊರತೆ ಇದೆ, ಮತ್ತು ಕೆಲವರಿಗೆ ಕೃತಕ ಪರಿಸರ ತಲೆತಿರುಗುವಿಕೆಯನ್ನು ಉಂಟುಮಾಡಬಹುದು. ಇದು ಎಲ್ಲಾ ಮಾನಸಿಕ ಸಮಸ್ಯೆಗಳಿಗೆ ಸಂಜೀವಿನಿಯಲ್ಲ. ಕೆಲವು ರೋಗಿಗಳಿಗೆ ಸಾಂಪ್ರದಾಯಿಕ ಚಿಕಿತ್ಸೆಗಳ ಸಂಯೋಜನೆ ಅಗತ್ಯವಾಗಿರುತ್ತದೆ. ತಜ್ಞರು ಹೇಳುವಂತೆ, "ವಿಆರ್ ಒಂದು ಸಹಾಯಕ ಸಾಧನವಷ್ಟೇ, ಥೆರಪಿಸ್ಟ್‌ಗೆ ಬದಲಿಯಲ್ಲ."

**ಒಂದು ಹೊಸ ಭರವಸೆ :** ವರ್ಚುಯಲ್ ರಿಯಾಲಿಟಿ ಥೆರಪಿಯು ಮಾನಸಿಕ ಆರೋಗ್ಯದ ಚಿಕಿತ್ಸೆಯಲ್ಲಿ ಒಂದು ಹೊಸ ಭರವಸೆಯ ದೀಪವಾಗಿದೆ. ಇದು ರೋಗಿಗಳಿಗೆ ತಮ್ಮ ಭಯವನ್ನು ಎದುರಿಸಲು, ಒತ್ತಡವನ್ನು ಜಯಿಸಲು ಮತ್ತು ಜೀವನದ ಸಂತೋಷವನ್ನು ಮರಳಿ ಪಡೆಯಲು ಒಂದು ಆಧುನಿಕ ಮಾರ್ಗವನ್ನು ತೆರೆದಿದೆ. ಇದು ಕೇವಲ ತಂತ್ರಜ್ಞಾನವಲ್ಲ, ಮನಸ್ಸಿನ ಗಾಯಗಳಿಗೆ ಒಂದು ಸೌಮ್ಯ ಔಷಧಿಯಂತೆ ಕಾರ್ಯನಿರ್ವಹಿಸುತ್ತದೆ.

# ಸಂಘಪರಿವಾರ ಸ್ವಾತಂತ್ರ್ಯ ಹೋರಾಟಕ್ಕೆ ಬರಲೇ ಇಲ್ಲ ಈಗ ದೇಶಭಕ್ತಿ ಬಗ್ಗೆ ಮಾತಾಡ್ತಾರೆ : ಸಿ.ಎಂ ವ್ಯಂಗ್ಯ

■ ಹಂಪಿ ಟೈಮ್ಸ್ ಮೈಸೂರು

ಸಂಘ ಪರಿವಾರ ಯಾವತ್ತೂ ಸ್ವಾತಂತ್ರ್ಯ ಹೋರಾಟಕ್ಕೆ ಬರಲೇ ಇಲ್ಲ. ಈಗ ದೇಶಭಕ್ತಿ ಬಗ್ಗೆ ಮಾತಾಡ್ತಾರೆ. ಸಾವರ್ಕರ್ ಮತ್ತು ಗೋಲ್ವಾಲ್ಕರ್ ಅಂಬೇಡ್ಕರ್ ಅವರ ಸಂವಿಧಾನದ ವಿರುದ್ಧ ಇದ್ದವರು ಎನ್ನುವ ಸ್ಪಷ್ಟ ತಿಳಿವಳಿಕೆ ಕಾರ್ಯಕರ್ತರಿಗೆ ಇರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಯುವ ಕಾಂಗ್ರೆಸ್ ಆಯೋಜಿಸಿದ್ದ "ಯುವ ಕ್ರಾಂತಿ" ಕಾರ್ಯಕರ್ತರ ತರಬೇತಿ ಶಿಬಿರದಲ್ಲಿ ವಿಶೇಷ ಉಪನ್ಯಾಸ ನೀಡಿದರು. ಸ್ವಾತಂತ್ರ್ಯ ಹೋರಾಟ ಮತ್ತು ಆಧುನಿಕ ಭಾರತ ನಿರ್ಮಾಣದಲ್ಲಿ ಕಾಂಗ್ರೆಸ್ ನ ತ್ಯಾಗ-ಬಲಿದಾನ ಮಹತ್ವದ ಪಾತ್ರ ನಿರ್ವಹಿಸಿದೆ.

ದೇಶಕ್ಕೆ ನಾಗರಿಕ ಹಕ್ಕು ಮತ್ತು ಸಾಮಾಜಿಕ ನ್ಯಾಯ ಒದಗಿಸಲು ಹುಟ್ಟಿದ ಪಕ್ಷ ಕಾಂಗ್ರೆಸ್. ಸಂಘ ಪರಿವಾರ ಈಗ ದೇಶಭಕ್ತಿ ಬಗ್ಗೆ ಮಾತಾಡ್ತಾರೆ ಎಂದು ಸಿ.ಎಂ ವ್ಯಂಗ್ಯವಾಡಿದರು.



ಗಾಂಧಿ ಅವರು ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದಂತೆ, ಭಾರತದಲ್ಲಿ ಅಂಬೇಡ್ಕರ್ ಅವರ ಸಂವಿಧಾನಕ್ಕೆ ಭದ್ರ ಬುನಾದಿ ಹಾಕಿದವರು ನೆಹರು. ಬಹುತ್ವದ ಭಾರತದ ನೆಲದಲ್ಲಿ ಏಕತೆ ತಂದು ಸಹಿಷ್ಣುಣತೆಯನ್ನು ಆಚರಣೆಗೆ ತರಲು ನೆಹರೂ ಕೊಡುಗೆ ಅಪಾರ. ಮನುಸ್ಮೃತಿ ಪ್ರೇರಿತ ಜಾತಿ ವ್ಯವಸ್ಥೆ ಭಾರತ ಸಮಾಜವನ್ನು ಜಾತಿ ಆಧಾರದಲ್ಲಿ ಬಿರುಕು ಮೂಡಿಸಿತು. ಈ ಇತಿಹಾಸ ನಿಮಗೆ ಗೊತ್ತಿರಬೇಕು ಎಂದರು.

ಯುವ ಕಾಂಗ್ರೆಸ್ ಅಂದರೆ ಭಾರತದ ಸಂವಿಧಾನ ಮತ್ತು ಬಹುತ್ವದ ರಕ್ಷಣೆಗೆ ನಿಂತ ಯುವ ಸೈನ್ಯ. ನಾವು ಏಕೆ ಕಾಂಗ್ರೆಸ್ ಕಟ್ಟುತ್ತಿದ್ದೇವೆ, RSS ಮತ್ತು ಸಂಘ ಪರಿವಾರ ಹೇಗೆ ಭಾರತದ ಬಹುತ್ವ ಮತ್ತು ಸಂವಿಧಾನ ವಿರೋಧಿ ಎನ್ನುವ ಸ್ಪಷ್ಟತೆ ನಿಮಗೆ ಇರಬೇಕು. ಈ ಸ್ಪಷ್ಟತೆ ಇಲ್ಲದವರು ಬಹಳ ವರ್ಷ ಕಾಂಗ್ರೆಸ್‌ನಲ್ಲಿ ಉಳೀತಾರೆ ಎನ್ನುವುದು ಅನುಮಾನ ಎಂದರು.

ಸ್ವಾತಂತ್ರ, ಸಮಾನತೆ, ಬ್ರಾತೃತ್ವ ಹಾಗೂ ಸಹಿಷ್ಣತೆ, ಸಹಭಾಳ್ವೆ ನಮ್ಮ ಸಂವಿಧಾನದ ಉಸಿರು. ಇದೇ ಭಾರತದ ಉಸಿರು ಕೂಡ ಆಗಿದೆ ಎಂದರು. "ಅಧಿಕಾರ ಬಲಾಢ್ಯರ ಕೈಯಲ್ಲಿ ಇರಬಾರದು. ಜನ ಸಾಮಾನ್ಯರ ಕೈಯಲ್ಲಿ ಇರಬೇಕು" ಎಂದು ಅಂಬೇಡ್ಕರ್ ಹೇಳಿದ್ದರು. ಕಾಂಗ್ರೆಸ್ ಜನರ ಕೈಗೆ ಅಧಿಕಾರ ಮತ್ತು ಅವಕಾಶಗಳನ್ನು ನೀಡುತ್ತಿದೆ. ಬಿಜೆಪಿ ಬಲಾಢ್ಯರಿಗೆ ಅಧಿಕಾರ ಮತ್ತು ಅವಕಾಶ ನೀಡುತ್ತಿದೆ. ಇದು ಸಂವಿಧಾನ ವಿರೋಧಿ. ಹೀಗಾಗಿ ಬಿಜೆಪಿ ಸಂವಿಧಾನವನ್ನೇ ವಿರೋಧಿಸುತ್ತದೆ ಎಂದರು. ನಾನು ಎರಡು ಬಾರಿ >>4

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಹಂಪಿ ಟೈಮ್ಸ್


HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 265 Issue: 265 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 27.04.2025 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2





1,25,000+
Digital E-PAPER READERS
To book Classified Display Ad
in HAMPI TIMES
Please call on
9448633038
No.1 HAMPI TIMES LEADING PRINT & DIGITAL District News Paper


## ನಿನಗೆ ನೀನೇ ಬೆಳಕು

ಶಿಕ್ಷಣದ ಬೇರುಗಳು ಕಹಿ ಇರಬಹುದು, ಆದರೆ ಅದರ ಫಲ ಸಿಹಿಯಾಗೇ ಇರುತ್ತದೆ.

– ಅರಿಸ್ಟಾಟಲ್

## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ





visit our website for daily updates
www.hampitimes.com
epaper.hampitimes.com


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us


## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

27–04–2025 – ಭಾನುವಾರ

| | |
|---|---|
| ತಿಥಿ | : ಅಮವಾಸ್ಯೆ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅಶ್ವಿನಿ |
| ಯೋಗ | : ಪ್ರೀತಿ |
| ಕರಣ | : ಚತುಷ್ಪಾದ |
| ಸೂರ್ಯೋದಯ | : 05:57:49 |
| ಸೂರ್ಯಾಸ್ತ | : 18:51:34 |
| ರಾಹು ಕಾಲ | : 17:15–18:52 |
| ಯಮಘಂಡ ಕಾಲ | : 12:25–14:01 |
| ಗುಳಿಕ ಕಾಲ | : 15:38–17:15 |



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 26–04–2025


| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.29 ಅಡಿ |
| ಒಳ ಹರಿವು | 503 ಕ್ಯುಸೆಕ್ |
| ಹೊರ ಹರಿವು | 388 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.871 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1578.41 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 65 ಕ್ಯುಸೆಕ್ |
| ಸಾಮರ್ಥ್ಯ | 3.748 ಟಿಎಂಸಿ |

# ಉಗ್ರರಿಗೆ ಉಗ್ರ ಶಿಕ್ಷೆಯಾಗಲಿ ಮುಸ್ಲಿಂ ಸಮುದಾಯ ಆಗ್ರಹ

### ಅಂಜುಮನ್ ಖಿದ್ಮತೆ ಇಸ್ಲಾಂ ಸಮಿತಿಯಿಂದ ದಾಳಿ ಖಂಡನೆ। ಮೃತರಿಗೆ ಶ್ರದ್ಧಾಂಜಲಿ




■ **ಹಂಪಿ ಟೈಮ್ಸ್ ಹೊಸಪೇಟೆ**

ಪೆಹಲ್ಗಾಮ್‌ದಲ್ಲಿ ಉಗ್ರರು ಪ್ರವಾಸಿಗರ ಮೇಲೆ ನಡೆಸಿ ದಾಳಿಯನ್ನು ಅಂಜುಮನ್ ಖಿದ್ಮತೆ ಇಸ್ಲಾಂ ಸಮಿತಿ ಹಾಗೂ ಮುಸ್ಲಿಂ ಸಮಾಜದಿಂದ ತೀವ್ರವಾಗಿ ಖಂಡಿಸುತ್ತೇವೆ. ಎಂದು ಅಂಜುಮನ್ ಖಿದ್ಮತೆ ಇಸ್ಲಾಂ ಸಮಿತಿ ಅಧ್ಯಕ್ಷ ಎಚ್.ಎನ್ ಮೊಹಮ್ಮದ್ ಇಮಾಮ ನಿಯಾಜಿ ಆಗ್ರಹಿಸಿದರು. ನಗರದ ಜೈಭೀಮ್ ವೃತ್ತದಲ್ಲಿ ಶನಿವಾರ ಸಂಜೆ ಹೊಸಪೇಟೆಯ ಅಂಜುಮನ್ ಖಿದ್ಮತ್ ಇಸ್ಲಾಂ ಸಮಿತಿಯಿಂದ ಪೆಹಲ್ಗಾಮದಲ್ಲಿನ ಉಗ್ರರ ದಾಳಿಯನ್ನು ಖಂಡಿಸಿ, ದಾಳಿಯಲ್ಲಿ ಮೃತಪಟ್ಟವ ಆತ್ಮಕ್ಕೆ ಶಾಂತಿ ಕೋರಿ ಮೇಣದ ಬತ್ತಿ ಹಚ್ಚಿ ಪ್ರಾರ್ಥಿಸಿ ಮಾತನಾಡಿದರು.

ಭಾರತ ಸರ್ವಧರ್ಮಗಳ ಹಾಗೂ ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ಶಾಂತಿಯನ್ನು ಕದಡುವ ಉಗ್ರಗಾಮಿಗಳಿಗೆ ತಕ್ಕ ಶಿಕ್ಷೆಯಾಗಲೇಬೇಕು. ಉಗ್ರರು ಧರ್ಮ ಜಾತಿ ಪಂಥ ಎಂಬುದನ್ನು ನೋಡದೇ ದುಷ್ಕೃತ್ಯವನ್ನು ಎಸಗುತ್ತಾ ಬಂದಿದ್ದಾರೆ. ಜೀವ ಎಲ್ಲರಿಗೂ ಅಮೂಲ್ಯ, ಜೀವ ತೆಗೆದ ಉಗ್ರರಿಗೆ ಕೇಂದ್ರ ಸರ್ಕಾರ ಉಗ್ರವಾದ ಶಿಕ್ಷೆ ನೀಡಬೇಕೆಂದು ಇಡೀ ಸಮುದಾಯ ಆಗ್ರಹಿಸುತ್ತಿದೆ. ಕೆಲ ದೃಶ್ಯ ಮಾಧ್ಯಮಗಳು, ಕೆಲ ರಾಜಕಾರಣಿಗಳು ಜಾತಿ ಧರ್ಮ ಹೆಸರಿನಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಭಾರತದಲ್ಲಿ ಹಿಂದೂ ಮುಸ್ಲಿಂರು ಸಾಮರಸ್ಯದಿಂದ ಬದುಕುತ್ತಿದ್ದೇವೆ. ಉಗ್ರರನ್ನು ಸದೆಬಡಿಯಲು ಕೇಂದ್ರ ಕಠಿಣ ಕ್ರಮ ಕೈಗೊಳ್ಳಲಿ ಎಂದರು.

ಸಮುದಾಯದ ಮುಖಂಡರಾದ ನಾಜಿಮ್ ಹಾಗೂ ಫಜಲುಲ್ಲಾ ಹಾಗೂ ರೆಹಮತ , ವಖ್ಫ್ ಬೋಡ್ ನ ಜಿಲ್ಲಾಧ್ಯಕ್ಷರಾದ ದಾದಾಪೀರ್ ಭಾವ್ ಹಾಗೂ ಅಂಜುಮನ್ ಕಮಿಟಿಯ ಉಪಾಧ್ಯಕ್ಷ ಎಮ್.ಎಮ್, ಫೈರೋಜ್ ಖಾನ್, ಕಾರ್ಯದರ್ಶಿ ಅಬೂಬಕ್ಕರ್ ಅಶ್ರಫಿ, ಜಂಟಿಕಾರ್ಯದರ್ಶಿಂ ಡಾ. ದರ್ವೇಶ್ ಮೈನುದ್ದಿನ್. ಸದ್ಯಸರಾದ ಗುಲಾಮ್ ರಸೂಲ್, ಖಾದರ್ ರಫಾಯಿ, ಹಾಗೂ ಮಸೀದಿಗಳ ಅಫೀಸಾಬ್‌ಗಳು ಸಮಾಜದ ಹಿರಿಯ ಮುಖಂಡರು ಯುವಕರು ಭಾಗವಹಿಸಿದ್ದರು.

# ಪುಸ್ತಕ ಬಹುಮಾನಕ್ಕಾಗಿ ಜಾನಪದ ಕೃತಿಗಳ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಜಾನಪದ ಅಕಾಡೆಮಿಯು 2024 ನೇ ಸಾಲಿನಲ್ಲಿ ದಿನಾಂಕ:01.01.2024 ರಿಂದ 31.12.2024ರವರೆಗೆ ಪ್ರಥಮ ಆವೃತ್ತಿಯಲ್ಲಿ ಮುದ್ರಣಗೊಂಡಿರುವ (ತಾಂತ್ರಿಕ ಹಾಗೂ ಪೂರ್ವಭಾವಿ ಪುಟಗಳನ್ನು ಹೊರತುಪಡಿಸಿ) ಕನಿಷ್ಟ 150 ಪುಟಗಳಿಗೂ ಮೇಲ್ಪಟ್ಟಿರುವಂತೆ, ವಿವಿಧ ನಾಲ್ಕುಪ್ರಕಾರಗಳ ಅತ್ಯುತ್ತಮ ಜಾನಪದ ಕೃತಿಗಳಿಗೆ ಬಹುಮಾನ ನೀಡುವ ಯೋಜನೆಯಡಿ ಜಾನಪದ ಕೃತಿಗಳನ್ನು ಪುಸ್ತಕ ಬಹುಮಾನಕ್ಕಾಗಿ ಆಹ್ವಾನಿಸಿದೆ.

ಲೇಖಕರು, ಪ್ರಕಾಶಕರು, ಸಂಪಾದಕರು ತಮ್ಮ 1 ಕೃತಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002 ಇವರಿಗೆ ಮೇ 20 ರೊಳಗೆ ತಲುಪುವಂತೆ ಖುದ್ದಾಗಿ, ಕೊರಿಯರ್ ಅಥವಾ ಅಂಚೆ ಮೂಲಕ ಕಳುಹಿಸಿಕೊಡಲು ಕೋರಿದೆ. ಈ ಪುಸ್ತಕವು ತಜ್ಞರಿಂದ ಪ್ರಕಾರವಾರು ಆಯ್ಕೆಯಾದಲ್ಲಿ, ನಂತರ ಪುಸ್ತಕ ಬಹುಮಾನಕ್ಕೆ ಲೇಖಕರಿಂದ ಉಳಿದಂತೆ 03 ಪ್ರತಿಗಳನ್ನು ಮೌಲ್ಯಮಾಪಕರ ಪರಿಶೀಲನೆಗೆ ತರಿಸಿಕೊಳ್ಳಲಾಗುವುದು.

**ಪ್ರಕಾರಗಳು:** ಜನಪದ ಗದ್ಯ, ಜನಪದ ಪದ್ಯ, ಜನಪದ ವಿಚಾರ–ವಿಮರ್ಶೆ– ಸಂಶೋಧನೆ ಮತ್ತು ಜನಪದ ಸಂಕೀರ್ಣ.

**ವಿ.ಸೂ:** ಈಗಾಗಲೇ ಪುಸ್ತಕ ಬಹುಮಾನ ಪಡೆದ ಸಂಪಾದಕರು / ಲೇಖಕರು ಮತ್ತೆ ಪುಸ್ತಕ ಬಹುಮಾನ ಯೋಜನೆಗೆ ಕೃತಿಗಳನ್ನು ಕಳುಹಿಸಬಾರದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಜಾನಪದ ಅಕಾಡೆಮಿ ಕನ್ನಡ ಭವನ, 2 ನೇ ಮಹಡಿ ಜೆ.ಸಿ.ರಸ್ತೆ, ಬೆಂಗಳೂರು–560002 ಅಥವಾ ದೂ. 080 – 22215509 ಗೆ ಸಂಪರ್ಕಿಸಬಹುದು ಎಂದು ಕನ್ನಡ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಅವರು ತಿಳಿಸಿದ್ದಾರೆ.

# ಉಗ್ರರ ದಾಳಿ ಖಂಡಿಸಿ ಕೊಟ್ಟೂರು ಬ್ಲಾಕ್ ಕಾಂಗ್ರೆಸ್‌ನಿಂದ ಪ್ರತಿಭಟನೆ




■ **ಹಂಪಿ ಟೈಮ್ಸ್ ಕೊಟ್ಟೂರು.**

ಪಹಲ್ಗಾಮ್‌ನಲ್ಲಿ ಉಗ್ರರು ಧರ್ಮದ ಹೆಸರಿನಲ್ಲಿ ಅಮಾಯಕ ಪ್ರವಾಸಿಗರನ್ನು ಕೊಂದಿದ್ದಾರೆ. ಇದು ಹೇಡಿಗಳ ಕೃತ್ಯ. ಕೇಂದ್ರ ಸರ್ಕಾರ ದಿಟ್ಟ ನಿರ್ಧಾರ ಕೈಗೊಳ್ಳವ ಮೂಲಕ ಅವರನ್ನು ಹೊಸಕಿಯಾಕಬೇಕು ಇದಕ್ಕೆ ರಾಜ್ಯ ಸರ್ಕಾರದ ಸಂಪೂರ್ಣ ಬೆಂಬಲವಿದೆ. ಇಡೀ ಭಾರತೀಯರು ನಿಮ್ಮ ಜೊತೆಗಿದ್ದೇವೆ ಎಂದು ಕಾಂಗ್ರೆಸ್ ಮುಖಂಡ ಬದ್ದಿ ಮರಿಸ್ವಾಮಿ ಹೇಳಿದರು.

ಪಟ್ಟಣದಲ್ಲಿ ಶುಕ್ರವಾರ ಸಂಜೆ ಕೊಟ್ಟೂರು ಬ್ಲಾಕ್ ಕಾಂಗ್ರೆಸ್ ಪಹಲ್ಗಾಮನಲ್ಲಿ ಮೃತಪಟ್ಟವರ ಅತ್ಮಕ್ಕೆ ಶಾಂತಿ ಕೋರಿ ಮೇಣದ ಬತ್ತಿ ಹಚ್ಚಿ ಶ್ರದ್ಧಾಂಜಲಿ ಸಲ್ಲಿಸಿ, ಉಗ್ರರ ಅಟ್ಟಹಾಸವನ್ನು ನಾಶಪಡಿಸುವಂತೆ ಆಗ್ರಹಿಸಿದರು. ಮಾಜಿ ಜಿಪಂ ಉಪಾದ್ಯಕ್ಷರು ಪಿ.ಹೆಚ್.ದೊಡ್ಡರಾಮಣ್ಣ ಮಾತನಾಡಿ, ಇದು ಭಾರತೀಯರ ಮೇಲೆ ನಡೆದ ಅಮಾನವೀಯ ಕೃತ್ಯ, ಇಲ್ಲಿ ರಾಜಕೀಯ ಮಾಡದೆ ಸರ್ವರೂ ಕೇಂದ್ರ ಸರ್ಕಾರಕ್ಕೆ, ಯೋಧರಿಗೆ ಬೆಂಬಲವಾಗಿ ನಿಂತು ಉಗ್ರರಿಗೆ, ಪಾಕಿಸ್ತಾನಕ್ಕೆ ನಮ್ಮ ಶಕ್ತಿ ಏನೆಂಬುದನ್ನು ತೋರಿಸಬೇಕೆಂದು ಹೇಳಿದರು.

ಕೊಟ್ಟೂರು ತಾಲೂಕು ಬ್ಲಾಕ್ ಕಾಂಗ್ರೆಶ್ ಅಧ್ಯಕ್ಷ ಐ.ಎಂ ಧಾರುಕೇಶ ಮಾತನಾಡಿದರು. ಪ್ರತಿಭಟನೆಯು ಪಟ್ಟದ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದಿಂದ ಪ್ರಾರಂಭವಾಗಿ ಮುಖ್ಯ ರಸ್ತೆಗಳಲ್ಲಿ ಉಗ್ರರ ವಿರುದ್ಧ ಘೋಷಣೆ ಕೂಗುತ್ತ ಬಸ ನಿಲ್ದಾಣದವರಿಗೆ ಸಾಗಿಬಂದಿತು. ಬಸ್ ನಿಲ್ದಾಣದ ಬಳಿ ಕೆಲ ಸಮಯದವರೆಗೆ ಮೃತರ ಆತ್ಮಕ್ಕೆ ಶಾಂತಿ ಕೋರಿ ಸಂತಾಪ ಸೂಚಿಸಿದರು. ಪ್ರತಿಭಟನೆಯಲ್ಲಿ ಯುವ ಕಾಂಗ್ರೆಸ್ ತಾಲೂಕು ಅಧ್ಯಕ್ಷ ಸಕ್ರಿ ವಿನಾಯಕುಮಾರ್, ಕಾಂಗ್ರೆಸ್ ಮುಖಂಡರು ಕೆ.ಶಿವಕುಮಾರ ಗೌಡ, ಗೂಳಿ ಮಲ್ಲಿಕಾರ್ಜುನ್, ಚಿರಿಬಿ ಕೊಟ್ರೇಶ್, ಉಮಾಪತಿ, ಕೆ. ಮಂಜುನಾಥ ಗೌಡ್ರು, ಅಡಕಿ ಮಂಜುನಾಥ, ವಕೀಲರು ಪುಲಿಕೇಶ್, ಕಾಂಗ್ರೆಸ್ ಯುವಕರು ಮುಖಂಡರು ಪಾಲ್ಗೊಂಡಿದ್ದರು.


ಹಂಪಿ ಟೈಮ್ಸ್‌ನಲ್ಲಿ ನಿಮ್ಮೂರ ಸುದ್ದಿ ಓದಲು ಮತ್ತು ಜಾಹೀರಾತಿಗಾಗಿ
ಸಂಪರ್ಕಿಸಿ: ಮೊ: 9448633038


# ಧೂಮಪಾನ ಮಾಡುವುದು ನಿಷೇಧ ನಿಯಮ ಉಲ್ಲಂಘಿಸಿದರೆ ದಂಡ – ಜೈಲು

### ತಾಲೂಕು ವೈದ್ಯಾಧಿಕಾರಿ ಪ್ರದೀಪ್ ಕುಮಾರ್ ಜಾಗೃತಿ ಜೊತೆಗೆ ಎಚ್ಚರಿಕೆ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ತಂಬಾಕು ಮತ್ತು ಧೂಮಪಾನ ನಿಷೇಧ ನಿಯಮಗಳನ್ನು ಉಲ್ಲಂಘಿಸಿದರೆ ದಂಡ ಅಥವ ಜೈಲು ಶಿಕ್ಷೆಗೊಳಗಾಗಬೇಕಾಗುತ್ತದೆ ಎಂದು ಎಂದು ತಾಲೂಕು ವೈದ್ಯಾಧಿಕಾರಿ ಪ್ರದೀಪ್ ಕುಮಾರ್ ಎಚ್ಚರಿಸಿದರು.

ಪಟ್ಟಣದಲ್ಲಿ ಶನಿವಾರ ಜಾಗೃತಿಗೆ ಚಾಲನೆ ನೀಡಿ ಮಾತನಾಡಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ತಂಬಾಕು ನಿಯಂತ್ರಣ ಘಟಕತ ಕಾಯ್ದೆ ತಂಬಾಕು ಸೇವನೆಯಿಂದ ಆಗುತ್ತಿರುವ ಸಮಸ್ಯೆಗಳನ್ನು ಪರಿಗಣಿಸಿ ತಂಬಾಕು ಉತ್ಪನ್ನಗಳನ್ನು ಉತ್ಪಾದನೆ ಸರಬರಾಜು ಮತ್ತು ಮಾರಾಟದ ಮೇಲೆ ನಿಯಂತ್ರಣ ಹೇರಲು ಭಾರತ ಸರ್ಕಾರವು 2023ರಲ್ಲಿ ಕೋಟಾ ಕಾಯ್ದೆಯನ್ನು ಜಾರಿಗೆ ತಂದಿದ್ದು ಸೆಕ್ಷನ್ 4 ರ ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದು ನಿಷೇಧ ಉಲ್ಲಂಘಿಸಿದರೆ ಧೂಮಪಾನ ಮಾಡಿದರೆ ರೂ.200 ಗಳ ದಂಡ ವಿಧಿಸಲಾಗುತ್ತದೆ. ಸಾರ್ವಜನಿಕ ಸ್ಥಳದ ಮಾಲೀಕರು ಮುಖ್ಯಸ್ಥರು ಕಡ್ಡಾಯವಾಗಿ ಧೂಮಪಾನ ನಿಷೇಧದ ನಾಮ ಫಲಕವನ್ನು ಪ್ರದರ್ಶಿಸುವುದು ಸಾರ್ವಜನಿಕ ಸ್ಥಳಗಳಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ದೂರು ನೀಡುವುದು ಧೂಮಪಾನ ಮಾಡಲು ತ್ಯಜಿಸುವ ಬೆಂಕಿಪೊಟ್ಟಣ ಲೈಟರ್ ಹಾಗೂ ಇತರೆ ಯಾವುದೇ ವಸ್ತುಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಇಡುವಂತಿಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡಲು ಅವಕಾಶ ನೀಡದಿ ರುವುದು. ಸೆಕ್ಷನ್ 5 ರ ಪ್ರಕಾರ ತಂಬಾಕು ಉತ್ಪನ್ನ ಗಳ ನೇರ ಹಾಗೂ ಪರೋಕ್ಷ ಜಾಹೀರಾತು, ಉತ್ತೇಜನ ಪ್ರಾಯೋಜಕತೆ ಮಾಡುವುದರ ಮೇಲೆ ನಿಷೇಧ. ಉಲ್ಲಂಘಿಸಿದರೆ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನು ವಿಧಿಸಲಾಗುತ್ತದೆ. ಸೆಕ್ಷನ್ 6ರ ಎ ಪ್ರಕಾರ, ಅಪ್ರಾಪ್ತ ವಯಸ್ಕರ ಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದು ಹಾಗೂ ಅಪ್ರಾಪ್ತ ವಯಸ್ಕರಿಂದ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಿ ಸುವುದರ ಮೇಲೆ ನಿಷೇಧ ತಂಬಾಕು ಮಾರಾಟ ಇರುವ ಅಂಗಡಿಯವರು ಕಡ್ಡಾಯವಾಗಿ 6ಎ ನಾಮಫಲಕವನ್ನು ಪ್ರದರ್ಶಿಸುವುದು. ಸೆಕ್ಷನ್ 6 ಬಿ ಪ್ರಕಾರ ಶಿಕ್ಷಣ ಸಂಸ್ಥೆಗಳ 100 ಮೀಟರ್ ಅಂತರದ ಒಳಗೆ ತಂಬಾಕು ಉತ್ಪನ್ನಗಳ ಮಾರಾಟ ಮಾಡುವುದರ ಮೇಲೆ ನಿಷೇಧ ಶಿಕ್ಷಣ ಸಂಸ್ಥೆಗಳ ಮುಖ್ಯ ಪ್ರವೇಶ ದ್ವಾರಗಳಲ್ಲಿ ಕೋಟಾ ಸೆಕ್ಷನ್ 4 ಹಾಗೂ 6 ಬಿ ನಾಮಫಲಕವನ್ನು ಕಡ್ಡಾಯವಾಗಿ ಪ್ರದರ್ಶಿಸುವುದು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರುಗಳು ತಮ್ಮ ಶಿಕ್ಷಣ ಸಂಸ್ಥೆಯನ್ನು ToFEI ನಿಯಮಾನುಸಾರ ತಂಬಾಕು ಮುಕ್ತಗೊಳಿಸುವುದು ಉಲ್ಲಂಘಿಸಿದರೆ 200 ರೂ ದಂಡ ವಿಧಿಸಲಾಗುವುದು. ಸೆಕ್ಷನ್ 7 8 9 ಪ್ರಕಾರ ತಂಬಾಕು ಉತ್ಪನ್ನಗಳ ಪಟ್ಟಣಗಳ ಮೇಲೆ ಶೇಕಡ 85ರಷ್ಟು ಸ್ಥಳಗಳಲ್ಲಿ ನಿರ್ದಿಷ್ಟ ಆರೋಗ್ಯದ ಸಂದೇಶಗಳಿಲ್ಲದೆ ಮಾರಾಟ ಮಾಡುವುದರ ಮೇಲೆ ಆಗುವ ಬಿಡಿಬಿಡಿಯಾಗಿ ಬೀಡಿ ಸಿಗರೇಟ್ ಮಾರಾಟ ಮಾಡುವುದರ ಮೇಲೆ ನಿಷೇಧ. ಉಲ್ಲಂಘಿಸಿದರೆ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನು ವಿಧಿಸಲಾಗುತ್ತದೆ ಎಂದು ತಿಳಿಸಿದರು.

ಭೋಜರಾಜ್, ಪೊಲೀಸ್ ಇಲಾಖೆ ರೇವಣಸಿದ್ದಪ್ಪ ಇತರರು ಕೆಲ ಅಂಗಡಿಗಳಿಗೆ ಭೇಟಿ ನೀಡಿ 100 ರೂಪಾಯಿ ದಂಡ ವಿಧಿಸಿದರು. ಒಟ್ಟು ಅಂಗಡಿಗಳಿಂದ 3100 ರೂಪಾಯಿಗಳಾಗಿದ್ದು. ಅಂಗಡಿ ಮಾಲೀಕರು ಜಾಗೃತಿ ವಹಿಸಬೇಕೆಂದು ತಿಳಿಸಿದರು.

# ವಿಶ್ವ ಮಲೇರಿಯಾ ದಿನಾಚರಣೆ ಜಾಗೃತ ಜಾತಕೆ ಚಾಲನೆ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ಪ್ರತಿಯೊಬ್ಬರೂ ತಮ್ಮ ಮನೆಯ ಸುತ್ತ, ಮುತ್ತ ಕೊಳಚೆ ನೀರು ನಿಂತುಕೊಳ್ಳದಂತೆ ಜಾಗೃತಿವಹಿಸುವುದು, ಸೊಳ್ಳೆ ಉತ್ಪತ್ತಿಯಾಗದಂತೆ ನಿಗಾವಹಿಸುವುದು ಹಾಗೂ ಸೊಳ್ಳೆ ಕಡಿತಕ್ಕೆ ಒಳಗಾಗದಂತೆ ರಕ್ಷ ಣೆ ಮಾಡಿಕೊಳ್ಳುವುದರಿಂದ ಮಲೇರಿಯಾ ತಡೆಗಟ್ಟಬಹುದು ಎಂದು ಟಿಎಚ್ಒ ಡಾ. ಎಸ್.ಪಿ.ಪ್ರದೀಪ್ ಕುಮಾರ್ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಶುಕ್ರವಾರ ವಿಶ್ವ ಮಲೇರಿಯಾ ದಿನಾಚರಣೆ ಜಾಗೃತಿ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದರು. ಸಾಂಕ್ರಾಮಿಕ ಕಾಯಿಲೆಗಳಲ್ಲಿ ಮಲೇರಿಯಾ ಒಂದು. ಸಾಂಕ್ರಾಮಿಕ ಕಾಯಿಲೆಗಳು ಸೊಳ್ಳೆಗಳಿಂದ ಹರಡುತ್ತವೆ.ಅನಾಫಿಲಸ್ ಜಾತಿಗೆ ಸೇರಿದ ಹೆಣ್ಣು ಸೊಳ್ಳೆಗಳಿಂದ ಮಲೇರಿಯಾ ಸಾಂಕ್ರಾಮಿಕ ಕಾಯಿಲೆ ಬರುತ್ತದೆ. ಮಲೇರಿಯಾ ಕಾಯಿಲೆಯ ಬಗ್ಗೆ ಜನರಿಗೆ ಅರಿವು ಮೂಡಿಸುವ ಉದ್ದೇಶದಿಂದ ಆರೋಗ್ಯ ಇಲಾಖೆ ವಿಶ್ವ ಮಲೇರಿಯಾ ದಿನಾಚರಣೆಯನ್ನು ಆಚರಿಸುವ ಮೂಲಕ ಜನರಿಗೆ ಅರಿವು ಮೂಡಿಸುವ ಕಾರ್ಯವನ್ನು ಮಾಡುತ್ತಿದೆ ಎಂದರು.




ಹರಿಯದೆ ನಿಂತುಕೊಳ್ಳುವ ಕೊಳಚೆ ನೀರು, ಮನೆಯ ಸುತ್ತಮುತ್ತಲಿನ ಪರಿಸರ ಸ್ವಚ್ಛತೆ ಇಲ್ಲದ ಸ್ಥಳಗಳಲ್ಲಿ ಮಲೇರಿಯಾ ಹರಡುವ ಸೊಳ್ಳೆಗಳು ಉತ್ಪಪತ್ತಿಯಾಗುತ್ತವೆ. ಸೊಳ್ಳೆ ಒಬ್ಬನಿಂದ ಮತ್ತೊಬ್ಬನಿಗೆ ಕಡಿಯುವ ಮೂಲಕ ಮಲೇರಿಯಾ ಸಾಂಕ್ರಾಮಿಕ ಕಾಯಿಲೆ ಬರುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಗೆ ಚಳಿ–ಜ್ವರ ಬರುವ ಲಕ್ಷ ಣ ಕಾಣಿಸಿಕೊಳ್ಳುತ್ತದೆ. ಕೂಡಲೇ ಹತ್ತಿರದಲ್ಲಿರುವ ಆಸ್ಪತ್ರೆಗೆ ಹೋಗಿ ವೈದ್ಯರಿಂದ ರಕ್ಷ ಪರೀಕ್ಷೆ ಮಾಡಿಸಿಕೊಳ್ಳುವುದರ ಜತೆಯಲ್ಲಿ ಅವರ ಸೂಚನೆಯಂತೆ ಚಿಕಿತ್ಸೆ ಗೆ ಒಳಗಾಗಬೇಕು ಎಂದು ಸಲಹೆ ನೀಡಿದರು.

ನಂತರ ಪಟ್ಟಣದ ರಾಘವೇಂದ್ರ ಪ್ಯಾರಮೆಡಿಕಲ್ ವಿಧ್ಯಾರ್ಥಿಗಳು ಮಲೇರಿಯಾ ಕುರಿತು ಜಾಗೃತಿ ಜಾಥವನ್ನು ಪಟ್ಟಣದ ವಿವಿಧ ರಸ್ತೆಗಳ ಮೂಲಕ ಸಂಚರಿಸಿ ಭಿತ್ತಿಚಿತ್ರಗಳ ಮೂಲಕ ಜಾಗೃತಿ ಮೂಡಿಸಿದರು. ಈ ಸಂದರ್ಭದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಗಳಾದ ಕೆ. ಜಗದೀಶ್, ವಾಹಾಬ್,ಗುರುಮೂರ್ತಿ, ಕಿರಿಯಾ ಆರೋಗ್ಯ ನಿರೀಕ್ಷೀಣಾಧಿಕಾರಿ ಕೆ.ಸುನೀತಾ, ಮಹೇಶ್, ಮಲೇರಿಯಾ ಮೇಲ್ವಿಚಾರಕ ಕೊಟ್ರೇಶ್, ಆರ್ ಕೆಎಸ್ ಕೆ ಆಪ್ತ ಸಮಾಲೋಚಕ ಓಬಣ್ಣ, ಆರೋಗ್ಯ ನಿರೀಕ್ಷಣಾಧಿಕಾರಿ ಮಹೇಶ್, ಕಿರಿಯಾ ಆರೋಗ್ಯ ಸುರಕ್ಷಾತಾಧಿಕಾರಿಗಳಾದ ಲಕ್ಷ್ಮಿ, ಶೃತಿ, ಶೀಲಾ, ದಿವ್ಯಾ, ಮಾಲಾ ಸೇರಿದಂತೆ ಅನೇಕರು ಇದ್ದರು.








## ಈಗ ದೇಶಭಕ್ತಿ ಬಗ್ಗೆ ಮಾತಾಡ್ತಾರೆ: ಸಿಎಂ ಸಿದ್ದರಾಮಯ್ಯ ವ್ಯಂಗ್ಯ

**ಎರಡನೆ ಪುಟದಿಂದ**



ಮುಖ್ಯಮಂತ್ರಿಯಾಗಿ ಅಸಮಾನತೆಯನ್ನು ಕಡಿಮೆ ಮಾಡುವ ಕಾರ್ಯ ಕ್ರಮಗಳನ್ನು ರೂಪಿಸಿ ಜಾರಿ ಮಾಡಿದ್ದೇವೆ. ಸ್ವಾತಂತ್ರ್ಯ ಸಾರ್ಥಕತೆ ಆಗಬೇಕಾದರೆ ಪ್ರತಿ ಯೊಬ್ಬರೂ ಆರ್ಥಿಕ ಮತ್ತು ಸಾಮಾಜಿಕ ಸಬಲತೆ ಪಡೆದುಕೊಳ್ಳಬೇಕು. ಕಟ್ಟ ಕಡೆಯ ಮನುಷ್ಯನಿಗೆ ಶಕ್ತಿ ಕೊಡುವುದೇ ಸರ್ವೋದಯದ ಆಶಯ ಎಂದರು.

ಮೌಢ್ಯ, ಕಂದಾಚಾರ, ಕರ್ಮ ಸಿದ್ಧಾಂತವನ್ನು ಕೃತಕವಾಗಿ ಸೃಷ್ಟಿಸಿ ನೀರು ಗೊಬ್ಬರ ಹಾಕಿ ಗಟ್ಟಿ ಮಾಡಿಟ್ಟಿದ್ದಾರೆ. ದೇವರು ಒಬ್ಬರಿಗೊಂದು ಮತ್ತೊಬ್ಬರಿಗೊಂದು ಮಾಡುವುದಿಲ್ಲ. ದೇವರ ಹೆಸರಲ್ಲಿ ಮೌಢ್ಯಗಳನ್ನು ಬಿತ್ತುವವರ ಬಗ್ಗೆ ಎಚ್ಚರ ವಿರಲಿ.

ಶರಣ ಬಸವಣ್ಣ ಹೇಳಿದ ರೀತಿಯಲ್ಲಿ ದೇವರು ಇದ್ದಾನೆ. ಬಸವಣ್ಣರ ರೀತಿಯಲ್ಲಿ ದೇವರನ್ನು ಕಾಣಬೇಕು. ಮಾಡಬಾರದ ಪಾಪಗಳನ್ನೆಲ್ಲಾ ಮಾಡಿ ದೇವರಿಗೆ ಕೈ ಮುಗಿದರೆ ಪಾಪ ಹೋಗುವುದಿಲ್ಲ. ಬಿಜೆಪಿ ದೇವರು, ಧರ್ಮದ ಹೆಸರಲ್ಲಿ ಬರೀ ಸುಳ್ಳು ಹರಡುತ್ತದೆ. ಈ ಬಗ್ಗೆ ದೇಶದ ಜನರ ತಿಳಿವಳಿಕೆ ಹೆಚ್ಚಿಸುವ ಕೆಲಸ ಆಗಬೇಕಿದೆ ಎಂದರು.

ತನ್ನನ್ನು ಚುನಾವಣೆಯಲ್ಲಿ ಸೋಲಿಸಿದ್ದು ಸಾವರ್ಕರ್ ಮತ್ತು ಡಾಂಗೆ ಎಂದು ಅಂಬೇಡ್ಕರ್ ಅವರೇ ಸ್ಪಷ್ಟವಾಗಿ ಬರೆದಿದ್ದಾರೆ. ನಿಮಗೆ ಸ್ಪಷ್ಟತೆ ಮತ್ತು ಬದ್ಧತೆ ಇದ್ದರೆ ಯಾರು ಏನೇ ಮಾಡಿದರೂ ನೀವು ಬದಲಾಗಲ್ಲ ಎಂದರು.

ರಾಜೀವ್ ಗಾಂಧಿ ಅವರು ಕೊಟ್ಟ ಮೀಸಲಾತಿಯನ್ನು ವಿರೋಧಿಸಿ ನ್ಯಾಯಾಲಯದ ಮೆಟ್ಟಿಲೇರಿದ್ದು ಬಿಜೆಪಿಯ ರಾಮಾ ಜೋಯಿಸ್. ಆದರೆ ನ್ಯಾಯಾಲಯ ರಾಜೀವ್ ಗಾಂಧಿ ಅವರವತಂದ ತಿದ್ದುಪಡಿಯನ್ನು ಎತ್ತಿ ಹಿಡಿದು ಇದು ಸಂವಿಧಾನ ಬದ್ದ ಎಂದು ಎತ್ತಿ ಹಿಡಿಯಿತು. ಮೀಸಲಾತಿಯನ್ನು ವಿರೋಧಿಸಿದ್ದ ಬಿಜೆಪಿ ಮಂಡಲ್ ವರದಿಯನ್ನೂ ವಿರೋಧಿಸಿತು ಎಂದರು.

ಹೀಗಾಗಿ ಇತಿಹಾಸ ಮತ್ತು ಸಿದ್ಧಾಂತದ ಬಗ್ಗೆ ನಿಮಗೆ ಸ್ಪಷ್ಟತೆ ಇದ್ದರೆ ಮುಂದೆ ಉತ್ತಮ ನಾಯಕರಾಗಿ ಬೆಳೆಯುತ್ತೀರಿ ಎಂದು ಕರೆ ನೀಡಿದರು. ಯುವ ಕಾಂಗ್ರೆಸ್ ಇಂದು ಇಲ್ಲಿ ಆಯೋಜಿಸಿರುವ ಇಂತಹ ಕಾರ್ಯಾಗಾರಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ನಡೆಯಬೇಕು ಎಂದು ಕರೆ ನೀಡಿದರು.

# ಉಚಿತ ಸಾರಿಗೆ ಖಚಿತ ಕಾಯಿಲೆ?

### ಡೆಂಗ್ಯೂ ಜ್ವರ ಹೆಚ್ಚುವ ಸೂಚನೆಗಳಿದ್ದರೂ ಜಾಗೃತರಾಗದ ಅಧಿಕಾರಿಗಳು । ಕೂಡ್ಲಿಗಿ ಬಸ್ ನಿಲ್ದಾಣ ಸೊಳ್ಳೆಗಳ ತಾಣ ಅಧಿಕಾರಿಗಳು ಫ್ಯಾನ್ ಕೆಳಗೆ । ಸೊಳ್ಳೆ ಕಾಟದ ಯಾತನೆ ಕೇಳೋರ್‍ಯಾರು? । ಪ್ರಯಾಣಿಕರ ಬಗ್ಗೆ ಕಾಳಜಿ ಕರುಣೆ ಇಲ್ಲವೇ?

■ **ಮಾರೇಶ ತಿಪ್ಪೇಹಳ್ಳಿ**
**ಹಂಪಿ ಟೈಮ್ಸ್ ಕೂಡ್ಲಿಗಿ**

ಸರ್ಕಾರ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಿದೆ, ಆದರೆ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುವ ಪ್ರಯಾಣಿಕರು ಸೊಳ್ಳೆಗಳನ್ನು ಕಚ್ಚಿಸಿಕೊಂಡು, ಗಬ್ಬು ನಾರುವ ವಾಸನೆ ಕುಡಿದು ಉಚಿತ ಕಾಯಿಲೆ ತಂದುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದರೂ, ಸಂಬಂಧಿಸಿದ ಅಧಿಕಾರಿಗಳಿಗೆ ಬಡ ಪ್ರಯಾಣಿಕರ ಆರೋಗ್ಯದ ಬಗ್ಗೆ ಕಿಂಚಿತ್ತು ಕಾಳಜಿ ಕರುಣೆ ಇಲ್ಲವೇ ಎಂದು ಪ್ರಯಾಣಿಕರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಆವರಣ ತಂಗು ಗುಂಡಿಗಳಲ್ಲಿ ಮಳೆ ಬಂದಾಗಲೆಲ್ಲ ನೀರು ನಿಂತು, ಸೊಳ್ಳೆಗಳ ಉತ್ಪತ್ತಿ ತಾಣವಾಗುತ್ತಿದ್ದರೂ ಸಂಬಂಧಿಸಿದ ಕೆಎಸ್ಸಾರ್ಟಿಸಿ ಅಧಿಕಾರಿಗಳು ಸ್ವಚ್ಛತೆಗೆ ಪಟ್ಟಣ ಪಂಚಾಯಿತಿಯತ್ತ ಬೊಟ್ಟು ಮಾಡಿ ತೋರುತ್ತಾರೆ. ಸಾರಿಗೆ ಬಸ್ ಅವಲಂಬಿಸಿದ ಜನಸಾಮಾನ್ಯರು ನಿತ್ಯ ಸಂಜೆಯಾಗುತ್ತಿದ್ದಂತೆ ಸೊಳ್ಳೆಗಳ ಹಾವಳಿಗೆ ತತ್ತರಿಸುತ್ತಿದ್ದಾರೆ. ಈಗಾಗಲೇ ಆರೋಗ್ಯ ಇಲಾಖೆಯೇ ಹೇಳಿದಂತೆ ಡೆಂಗ್ಯೂ ಜ್ವರ ಹೆಚ್ಚಾಗುವ ಸಾಧ್ಯತೆ ಇದೆ. ಸ್ವಚ್ಛತೆ ಕಾಯ್ದುಕೊಳ್ಳಬೇಕೆಂದು ವೈದ್ಯರು ಸೂಚನೆಗಳನ್ನು ನೀಡಿದ್ದರೂ, ಕೇಳುವವರಿಲ್ಲದಂತಾಗಿದೆ. ಸರ್ಕಾರಿ ಅಧಿಕಾರಿಗಳ ಸ್ವಚ್ಛತೆಯ ಸೂಚನೆಗಳು ಸರ್ಕಾರಿ ಅಧಿಕಾರಿಗಳೇ ಪಾಲಿಸುತ್ತಿಲ್ಲ ಎಂಬುದು ಮೇಲ್ನೋಟಕ್ಕೆ ಕಾಣುತ್ತಿದೆ. ವೈದ್ಯರ, ಅಧಿಕಾರಿಗಳ ಸಲಹೆ ಸೂಚನೆಗಳು ಕೇವಲ ಖಾಸಗಿ ಜನವಸತಿ ಪ್ರದೇಶಗಳಿಗೆ ಮಾತ್ರ ಅನ್ವಯವೇ?, ಸರ್ಕಾರಿ ಕಚೇರಿ ಹಾಗೂ ವಿವಿಧ ಸ್ಥಳಗಳಲ್ಲಿನ ತಗ್ಗು ಗುಂಡಿಗಳಲ್ಲಿ ಕೊಳಚೆ ನೀರು ನಿಂತರೆ ಜ್ವರ ಬರೋದಿಲ್ಲವೇ? ಎಂಬ ಪ್ರಶ್ನೆ ಪ್ರಯಾಣಿಕರನ್ನು ಕಾಡತೊಡಗಿದೆ. ಕೂಡ್ಲಗಿ ಬಸ್ ನಿಲ್ದಾಣದಲ್ಲಿ ಅಶುಚಿತ್ವ ತಾಂಡವವಾಡುತ್ತಿದೆ. ಈಗಾಗಲೇ ಪ್ರಯಾಣಿಕರು ಅನೇಕ ಬಾರಿ ನಿಲ್ದಾಣದ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಿಲ್ಲದಂತಾಗಿದೆ. ಇನ್ನಾದರೂ ಸಂಬಂಧಿಸಿದ ಸಾರಿಗೆ ಅಧಿಕಾರಿಳು, ಜನಪ್ರತಿನಿಧಿಗಳು ಬರಿ ಭರವಸೆ ಕೊಡುವುದರ ಬದಲಿಗೆ, ಮೊತ್ತೊಬ್ಬರತ್ತ ಬೊಟ್ಟು ತೋರುವ ಬದಲು ಪ್ರಯಾಣಿಕರ ಅನುಕೂಲಕ್ಕೆ ಸ್ವಚ್ಛತೆ ಹಾಗೂ ಆರೋಗ್ಯಕ್ಕೂ ಒತ್ತು ನೀಡಬೇಕೆಂದು ಪ್ರಯಾಣಿಕರು ಒತ್ತಾಯಿಸಿದ್ದಾರೆ.

> ಮಳೆ ಬಂದಾಗಲೆಲ್ಲ ಬಸ್ ನಿಲ್ದಾಣದ ಪಕ್ಕದಲ್ಲಿ ಮಳೆನೀರು ನಿಂತು ಹಲವಾರು ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯಲ್ಲಿ ಪ್ರಯಾಣಿಕರು ಇದ್ದಾರೆ. ಸಂಜೆಯಾದರೆ ಪ್ರಯಾಣಿಕರಿಗೆ ಸೊಳ್ಳೆಗಳ ಕಾಟ, ವಿಷ ಜಂತುಗಳದ್ದೇ ಚಿಂತೆ. ನೀರು ನಿಲ್ಲದಂತೆ ಸಾರಿಗೆ ಅಧಿಕಾರಿಗಳು ಅಗತ್ಯ ಕ್ರಮವಹಿಸಿ, ಜನಸಾಮಾನ್ಯರ ಆರೋಗ್ಯ ಕಾಪಾಡಬೇಕು.
>
> – **ಬಿ.ಮಹೇಶ್**
> **ಡಿಎಸ್‌ಎಸ್ ತಾ.ಸಂಘಟನಾ ಸಂಚಾಲಕ ಕೂಡ್ಲಿಗಿ**

> ಬಸ್ ನಿಲ್ದಾಣದ ಪಕ್ಕದಲ್ಲಿ ನೀರಿ ನಿಲ್ಲುವುದು ನಮ್ಮ ಗಮನಕ್ಕಿದೆ. ನೀರು ನಿಲ್ಲುವ ಜಾಗಗಳಿಗೆ ಗ್ರಾವಲ್ ಹಾಕುವಂತೆ ಪಟ್ಟಣ ಪಂಚಾಯತಿ ಯವರಿಗೆ ತಿಳಿಸಿದ್ದೇವೆ. ಶಾಸಕರು ಸಹ ಅಧಿಕಾರಿಗಳಿಗೆ ಸೂಚಿಸಿದ್ದಾರೆ.
>
> – **ಮಂಜುನಾಥ, ಹೂನ್ನಾಳ್**
> **ಸಾರಿಗೆ ಇಲಾಖೆ ಘಟಕ ವ್ಯವಸ್ಥಾಪಕರು, ಕೂಡ್ಲಿಗಿ**

# ಶಾಂತಿ ಸಾಗರ ಪ್ರವಾಸಿ ತಾಣವಾಗಿಸಲು ಸಹಕರಿಸಿ

### ಕೆರೆ ಮಲಿನವಾಗದಂತೆ ಕ್ರಮಗಳ ಬಗ್ಗೆ ವರದಿ ನೀಡಲು ಪರಿಸರ ಅಧಿಕಾರಿಗೆ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಸೂಚನೆ

■ **ಹಂಪಿ ಟೈಮ್ಸ್ ದಾವಣಗೆರೆ**

ಶಾಂತಿಸಾಗರ ಅತ್ಯಂತ ಸುಂದರವಾದ ಪ್ರದೇಶವಾಗಿದ್ದು ಈ ಪ್ರದೇಶವನ್ನು ಒತ್ತುವರಿಯಾಗದಂತೆ ನೋಡಿಕೊಂಡು ನೀರು ಮಲಿನವಾಗದಂತೆ ತಡೆಗಟ್ಟಲು ವಿವರ ವರದಿ ನೀಡುವಂತೆ ಪರಿಸರ ಇಲಾಖೆ ಅಧಿಕಾರಿಗೆ ನ್ಯಾಯ ಮೂರ್ತಿ ಹಾಗೂ ಉಪಲೋಕಾಯುಕ್ತ ರಾದ ಬಿ.ವೀರಪ್ಪ ಸೂಚನೆ ನೀಡಿದರು.

ಅವರು ಶುಕ್ರವಾರ ಶಾಂತಿಸಾಗರ ಹಿನ್ನೀರು ಪ್ರದೇಶಕ್ಕೆ ಭೇಟಿ ನೀಡಿ ಕೆರೆ ಒತ್ತುವರಿ ಬಗ್ಗೆ ಪರಿಶೀಲನೆ ನಡೆಸಿದರು.

ಶಾಂತಿ ಸಾಗರ (ಸೂಳೆಕೆರೆ) 5447. 10 ಎಕರೆ ವಿಸ್ತೀರ್ಣ ಹೊಂದಿದ್ದು, ಇದರಲ್ಲಿ 219 ಎಕರೆ 10 ಒತ್ತುವರಿಯಾಗಿದೆ ಎಂದು ಗುರುತಿಸಲಾಗಿದೆ. ಒತ್ತುವರಿಯಾಗ ಜಾಗವನ್ನು ತೆರವು ಮಾಡಲು ಕ್ರಮ ಕೈಗೊಳ್ಳಬೇಕು. ಇಲ್ಲಿಂದ ಅನೇಕ ನಗರ, ಪಟ್ಟಣ ಹಾಗೂ ಅನೇಕ ಗ್ರಾಮಗಳಿಗೆ ಬಹುಗ್ರಾಮ ಯೋಜನೆಯ ಮೂಲಕ ಕುಡಿಯುವ ನೀರನ್ನು ಪೂರೈಕೆ ಮಾಡಲಾಗುತ್ತಿದೆ. ಕೆರೆಯ ಹೂಳೆತ್ತುವುದರಿಂದ ಹೆಚ್ಚಿನ ನೀರನ್ನು ಸಂಗ್ರಹಿ ಸಲು ಸಾಧ್ಯವಾಗಲಿದೆ. ರೈತರು ತಮ್ಮ ತೋಟ, ಜಮೀನುಗಳಿಗೆ ಮಣ್ಣನ್ನು ತೆಗೆದುಕೊಂಡು ಹೋಗುವು ದರಿಂದ ರೈತರಿಗೂ ಲಾಭ ಮತ್ತು ಅಂತರ್ಜಲ ವೃದ್ಧಿಯಾಗಿ ನೀರಿನ ಸಂಗ್ರಹ ಹೆಚ್ಚಲಿದೆ.

ಈ ವೇಳೆ ಸ್ಥಳದಲ್ಲಿದ್ದ ಕೆಲವು ರೈತರು ಮೇಲಿನ ಮೂರು ಅಡಿಯೊಂದಿಗೆ ಇನ್ನೂ ಆಳದವರೆಗೆ ಮಣ್ಣು ತೆಗೆಯುತ್ತಾರೆ ಎಂದಾಗ ರೈತರೊಂದಿಗೆ ಸಭೆ ನಡೆಸಿ ಹೂಳೆತ್ತಲು ಮುಂದಾಗಲು ತಿಳಿಸಿ, ರೈತರೂ ಇದಕ್ಕೆ ಸಹಕಾರ ನೀಡಬೇಕೆಂದರು.

ಕೋಲಾರದ ಭಾಗದಲ್ಲಿ 1000 ಅಡಿಗಿಂತ ಆಳದ ವರೆಗೂ ನೀರು ಸಿಗುವುದೇ ಕಷ್ಟವಾಗಿದೆ. ಶಾಂತಿಸಾಗರ ಬಹಳ ಸುಂದರವಾದ ಪ್ರದೇಶವಾಗಿದ್ದು ಇದನ್ನು ಸಂರಕ್ಷಣೆ ಮಾಡುವುದರಿಂದ ಭವಿಷ್ಯಕ್ಕೆ ಅನುಕೂಲ ಮತ್ತು ಪ್ರಾಣಿ, ಪಕ್ಷಿ ಸೇರಿದಂತೆ ಸಕಲ ಜೀವರಾಶಿಗಳಿಗೂ ಅನುಕೂಲವಾಗಲಿದೆ. ಈ ಸಂಪತ್ತನ್ನು ಒಮ್ಮೆ ಕಳೆದುಕೊಂಡರೆ, ಭವಿಷ್ಯದ ಪೀಳಿಗೆ ಸಾಕಷ್ಟು ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ.

**ಶಾಂತಿಸಾಗರ ಪ್ರವಾಸಿ ತಾಣ:** ಶಾಂತಿ ಸಾಗರವನ್ನು ಪ್ರವಾಸಿ ತಾಣವಾಗಿಸಲು ಸಾಕಷ್ಟು ಅವಕಾಶಗಳಿವೆ. ಕೆರೆ ಸುತ್ತಮುತ್ತಲು ಅರಣ್ಯ ಸಸಿಗಳನ್ನು ಬೆಳೆಸಬೇಕು. ಇಲ್ಲಿ ಹೋಂಸ್ಟೇಗಳಿಗೆ ಅವಕಾಶ ಮಾಡಿಕೊಡಬಾರದು. ಜಲಸಾಹಸ ಕ್ರೀಡೆಗಳಿಗೆ ಇನ್ನೂ ಹೆಚ್ಚಿನ ಆದ್ಯತೆ ನೀಡಿ ನೀರು ಮಲಿನವಾಗದಂತೆ ಪ್ಲಾಸ್ಟಿಕ್ ನೀರಿಗೆ ಹಾಕಿಸಬೇಡಿ ಮತ್ತು ಪ್ರವಾಸಿಗರು ತಂದ ಆಹಾರವನ್ನು ಕೆರೆಗೆ ಹಾಕದಂತೆ ನೋಡಿಕೊಳ್ಳಲು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಕೆರೆ ಮಾಲಿನ್ಯ ತಡೆಗೆ ಸಮಗ್ರ ವರದಿ ನೀಡಲು ಸೂಚನೆ:** ಶಾಂತಿ ಸಾಗರ ವ್ಯಾಪ್ತಿಯಲ್ಲಿ 10 ಪಂಚಾಯಿತಿಗಳು ಬರುತ್ತವೆ. ಇಲ್ಲಿನ ಬಳಕೆ ನೀರನ್ನು ಮತ್ತು ಮಲ, ಮೂತ್ರದ ನೀರು ಶಾಂತಿ ಸಾಗರಕ್ಕೆ ಸೇರದಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಪರಿಶೀಲಿಸಿ ಸಮಗ್ರವಾದ ವರದಿಯನ್ನು ಪರಿಸರ ಇಲಾಖೆ ಅಧಿಕಾರಿಗಳು ನೀಡಬೇಕು. ಅಧಿಕಾರಿಗಳು ನೀಡಿದ ವರದಿಯನ್ನು ಲೋಕಾಯುಕ್ತ ಅಧಿಕಾರಿಗಳಿಂದ ಪರಿಶೀಲನೆ ನಡೆಸಲಾಗುತ್ತದೆ ಎಂದು ತಿಳಿಸಿದರು.

ಲೋಕಾಯುಕ್ತ ಅಪರ ನಿಬಂಧಕರಾದ ಕೆ.ಎಂ. ರಾಜಶೇಖರ್, ಉಪನಿಬಂಧಕರಾದ ಅರವಿಂದ್ ಎನ್.ವಿ, ಮಿಲನ, ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರಣ್ಣನವರ, ಜಿಲ್ಲಾಧಿಕಾರಿ ಸುರೇಶ್ ಬಿ.ಇಟ್ನಾಳ್, ಪೊಲೀಸ್ ಅಧೀಕ್ಷಕ ಉಮಾ ಪ್ರಶಾಂತ್ ಉಪಸ್ಥಿತರಿದ್ದರು.





